ಕೊರವಂಜಿ



Koravanji

ಮಾರ್ಚಿ

೧೯೬೩

ಸಂಪಾದಕರು

ಶ್ರೀ॥ ರಾ. ಶಿ.

ಬರಹಗಾರರು :

ಶ್ರೀ॥ ಗೋಪಾಲಿ
ಶ್ರೀಮತಿ॥ ನಾಗರತ್ನ
ಶ್ರೀ॥ ಬಿಜಾಯ್
ಶ್ರೀ॥ ಬಿಳಿಗಿರಿ
ಶ್ರೀ॥ ಅ. ರಾ. ಸೇ.
ಶ್ರೀ॥ ರಾಮಿ
ಶ್ರೀ॥ ಕ. ನ. ರ.
ಶ್ರೀ॥ ಅಷ್ಟಾವಕ್ರ
ಶ್ರೀ॥ ಕುಮಾರ್
ಶ್ರೀ॥ ಕೇಫ.
ಶ್ರೀ॥ ಎನ್. ನಾರಾಯಣ ಬಲ್ಲಾಳ
ಶ್ರೀ॥ ಬಂಗಾರಯ್ಯ

ಇತ್ಯಾದಿ ಇತ್ಯಾದಿ

ತಿಳಿನಗೆಯ ಮಾಸಪತ್ರಿಕೆ

ಬಿಡಿ ಪ್ರತಿ
[illegible]

ಕೊರವಂಜಿ

ಸಂಪುಟ ೨೧ ಮಾರ್ಚಿ ೧೯೬೩ ಸಂಚಿಕೆ ೧೨

★ ಕುಹಕಿಡಿಗಳು ★

ಬಡ್ಜೆಟ್ ಸೂತಕವನ್ನು ಆಚರಿಸುವ ಓದುಗರಿಗೆಲ್ಲಾ ಕೊರವಂಜಿಯು ಸಂತಾಪವನ್ನು ಸೂಚಬಯಸುತ್ತಾಳೆ

* * * *

ಪ್ರಪಂಚದ ಮೊದಲ ಯುದ್ಧದಲ್ಲಿ, ಅಂದರೆ ಸುಮಾರು 2000 ವರ್ಷಗಳ ಕೆಳಗೆ ಒಬ್ಬನನ್ನು ಕೊಲ್ಲಲು ಸುಮಾರು 100 ನ. ಪೈ ಖರ್ಚಾಗುತ್ತಿತ್ತು.

ಪ್ರಪಂಚದ 1914ರ ಯುದ್ಧದಲ್ಲಿ ಒಬ್ಬನನ್ನು ಕೊಲ್ಲಲು 13000 ರೂಪಾಯಿ ಖರ್ಚು!! ಈಗ ಅಣುಬಾಂಬು ಪ್ರಗತಿಯಾದಮೇಲೆ ಒಬ್ಬನನ್ನು ಕೊಲ್ಲಲು 50 ನ. ಪೈ. ಸಾಕು!

—ಪ್ರಗತಿ ಅಂದರೆ ಇದು!

* * * *

"ಚಿನ್ನ ಬೆಳ್ಳಿ ಕೆಲಸ ಐತ ಮಾಡ್ಸೋದು" ಅಂತ ಕೂಗಿಕೊಂಡು ಬರ್ತಾ ಇದ್ದರಲ್ಲಾ ಅವರೆಲ್ಲರೂ ಈಗ

"ಕಲಾಯ್ ಕಲಾಯ್" ಅಂತ ರಸ್ತೇಲಿ ಕೂಗಿಕೊಂಡು ಓಡಾಡ್ತಿದಾರಂತೆ!!

* * * *

ಜೈಲಿನ ಕೈದಿಗಳು ಒಂದು ಹೊತ್ತಿನ ಊಟ ಬಿಟ್ಟು, ಉಳಿತಾಯವಾದ ಆ ಹಣವನ್ನು ರಾಷ್ಟ್ರೀಯ ರಕ್ಷಣಾ ನಿಧಿಗೆ ಕಳಿಸಿದರಂತೆ.

—ಯಾಕೆ! ಆ ಜೈಲಿನ ಊಟ ಬಲು ರುಚಿ ಎಂದು ನಾಯಕರು ಹೇಳುತ್ತಿದ್ದರಲ್ಲಾ!

ಬೆಂಗಳೂರಿನಲ್ಲಿ ಶಿವರಾತ್ರಿಯನ್ನು ಯಶಸ್ವಿಯಾಗಿ ಆಚರಿಸಿದರಂತೆ.

—ರಾತ್ರಿಯೆಲ್ಲಾ ಜಾಗರಣೆ ಇದ್ದು, ನೆಲ್ಲೀಲಿ ನೀರು ಬಂದಾಗ ತುಂಬಿಟ್ಟು ಕೊಳ್ಳೋಣ ಅಂತ ಜನರೆಲ್ಲಾ ಶಿವ! ಶಿವ! ಎಂದು ಕಾದಿದ್ದರಂತೆ!

* * * * *

ರಷ್ಯಾದಲ್ಲಿ "ಮಹಾ ಭಾರತ"ದ ತರ್ಜುಮೆಯನ್ನು ಮಾಡುತ್ತಿದ್ದಾರಂತೆ.

—ಚೀಣೀಯರು ಕುರುಕ್ಷೇತ್ರವನ್ನೇ ಆರಂಭಿಸಿದ್ದಾರಲ್ಲ, ಮೊದಲೇ!

* * * *

ರೈಲ್ವೆ ಪ್ರಯಾಣೀಕರ ದರಗಳಲ್ಲಿ ಏರಿಕೆ ಇಲ್ಲವಂತೆ.

—ಹೆಚ್ಚು ಅಪಘಾತಗಳಾಗುತ್ತಿರುವ ರೈಲ್ವೆ ಪ್ರಯಾಣಕ್ಕೆ, ಹೆಚ್ಚು ಹಣ ಕೊಡಿ ಅಂತ ಕೇಳುವುದಕ್ಕೆ, ಪಾಪ! ಬಾಯಿ ಬರಲಿಲ್ಲವೇನೋ?

* * * *

"ಅಧಾರದ ಉಡಿಗೆಯಲ್ಲಿ ನಮ್ಮನ್ನೆಲ್ಲಾ ನಿಲ್ಲಿಸೋತನಕ, ಆರ್ಥಿಕ ಸಚಿವರಿಗೆ ನೆಮ್ಮದಿಯಾಗೋದಿಲ್ಲ" ಎಂದೊಬ್ಬರು ಕೊರಗು ಹೇಳಿಕೆ ಕೊಟ್ಟಿದ್ದಾರೆ.

—ಅಂತಹ ಉಡಿಗೆಯೇ ಇಲ್ಲದ ಕೊರವಂಜಿಗೆ ಭಯವೇ ಇಲ್ಲ!!

* * * *

ಮಹಾ ಕುಂಭಾಭಿಷೇಕದ ಅಂಗವಾಗಿ ಆಚರಿಸುವ ಹೋಮ ಹವನಾದಿಗಳಲ್ಲಿ "ಚೀಣಾಯಸ್ವಾಹಾ! ಚೀಣಾಯ ಇದನ್ನವಮ!" ಎಂದು ಹೊಸ ಮಂತ್ರ ವನ್ನು ಬಳಸುತ್ತಾರೆಂಬುದು ಖಂಡಿತವಲ್ಲವಂತೆ.

* * * *

ನಾಲ್ಕು ಸುತ್ತು ಹಾಕಿದ್ದ ಹೆಬ್ಬಾವಿನ ಬಾಯನ್ನು ರೈತನೊಬ್ಬನು, ಬಿಡಿಸಿ, ಸಿಗಿದು ಕೊಂದನಂತೆ—ಆಫ್ರಿಕಾದ "ನಕುರು" ಹಳ್ಳಿಯಲ್ಲಿ—

ಚೀಣಾ ಹೆಬ್ಬಾವಿನ ಭವಿಷ್ಯದ ಸೂಚನೆ!!

* * * *

ಚೀಣೀಯರನ್ನು ಮದುವೆಯಾಗಿದ್ದ ಕೆಲವು ಭಾರತೀಯ ಹೆಂಗಸರು, ಡಾರ್ಜಿಲಿಂಗ್ ಪ್ರದೇಶಗಳಿಂದ, ಚೀಣಾಕ್ಕೆ, ಗಂಡಂದಿರೊಡನೆ ಹೋದರಂತೆ

—ಸಾಮೂಹಿಕ ಸಂಸಾರದ ಆಸೆಯಿರಬಹುದೇ?

* * * *

ಸ್ಥೂಲ ರಮಣಿಯರು ಇನ್ನುಮೇಲೆ ಬಿಗಿಯಾದ ಡಾಬನ್ನು ಹಾಕಿಕೊಂಡು ಊಟಕ್ಕೆ ಕುಳಿತರೆ, ಕೃಶಾಂಗಿಯರಾಗಬಹುದು! (ವರದಿ)

—ಹಾಗೂ ಆಗ ಮಡವೆಗಳೂ ಏಳುಲ್ಲವಂತೆ. ಅಂದಮೇಲೆ ಏನು ಪ್ರಯೋಜನ!

ನಮ್ಮೂರ ಭಾಗೀರಥಿಯರು

ಶ್ರೀಮಾನ್ ವಿ. ಸೀ. ಯವರಿಗೆ ಎರಡೂ ಕೈಯೆತ್ತಿ ನಮಿಸಿ

ಕಾದಿರುವಳು ಗೃಹಿಣೀ
ನೀರು ಬರುವುದೆಂದು
ತನ್ನ ಕಾರ್ಯ ಮುಗಿವುದೆಂದು ||

ಬೆಳಗಿನಿಂದ ಕಾದು ಕುಳಿತು
ನಳದ ಮೂತಿ ನೋಡಿ ಬಳಲಿ
ಮುಸುರೆ ಸಹಿತ ಮುಖವ ಕೂಡ
ತೊಳೆಯಲಿಕ್ಕೇ ನೀರು ಇರದೆ ||

ಸೊಂಟದಲ್ಲಿ ಕೊಡವನಿಟ್ಟು
ಕೊಳಕು ಜೂಲು ಸೀರೆಯುಟ್ಟು
ಬೀದಿಯಾಚೆ ಬೇಗ ಬಂದು
ಹಾದಿ ನಳದ ಬಳಿಯೇ ನಿಂದು ||

ಬಾ ಗಂಗೆ, ತುಂಗೆ ಎಂದು
ಬರುತಿಹಳೋ ಇಹಳು ಎಂದು
ಹಗಲು ಎಲ್ಲ ತಪಿಸುತಿಹಳು
ನಿಶಿಯು ಎಲ್ಲ ಕಾಯುತಿಹಳು ||

ಬಂದೀತೋ ಬಾರದಿರದೋ
ಕಂಡೀತೋ ಕಾಣದಿರದೊ
ಎಂದೆನುತ್ತ ಕೊರಗುತಿಹಳು
ಬೇಸಿಗೆಯು ಬರುವ ಕಂಡು ||

ಕಾವೇರಿ! ಬೇಗ ಬಾರೆ!
ಬೇಗ ನಳದಿ ಮುಖವ ತೋರೆ
ನೀರು ಕಾಣದವರ ಮೊಗವ
ತೊಳೆಯೆ ಬೇರೆ; ಬಾರೆ ತಾಯೆ!

—ಗೋಪಾಲಿ

"ತೆಪ್ಪಗಿದ್ದ ಕೊರವ"

"ಓಹೋಹೋಹೋ" ಅಂದ ಕೊರವ ಆ ಸಂಜೆ ಕ್ಲಬ್ಬಿನಲ್ಲಿ.

ಸೂರಿಗೆ ನೇತುಬಿದ್ದಿದ್ದ ದೀಪಗಳೆಲ್ಲವೂ, ಆ ಧ್ವನಿಯ ಹೊಡೆತಕ್ಕೆ ರಾಕ್ ಅಂಡ್ ರೋಲ್ ಮಾಡಿದುವು, ಇನ್ನೂ ಸೂರ್ಯ ಮುಳುಗಿತ್ತಿಲ್ಲ. ಗಂಟಲು ಆರಿತ್ತಿಲ್ಲ ಅಷ್ಟರಲ್ಲೇ ಈ ಬಿರುಸಿನ ಕೂಗು! ಏನಾಯ್ತು ಅನಾಹುತ, ಹೀಗೆ ಕೊರವ ಕೂಗುಕ್ಕೆ?

ಮೂರುತಿಂಗಳಿಂದ ಕ್ಲಬ್ಬಿಗೆ ಬರದೆ ಇದ್ದ ಮಲೆನಾಡ ಮಹಾಬೊಲಯ್ಯ ಆಗತಾನೆ ಕ್ಲಬ್ಬಿಗೆ ಬಂದಿದ್ದ. ಅವನನ್ನು ಕಂಡ ಕೊರವ ಸ್ವಾಗತ ಬೊಬ್ಬೆ ಹಾಕಿದ್ದ. ಒಣಮಲೆನಾಡಿನಿಂದ ವಾರಕ್ಕೊಮ್ಮೆ ಬೆಂಗಳೂರಿಗೆ ಬಂದು ತಂಪೆರೆದುಕೊಳ್ಳುತ್ತಿದ್ದ ಮಹಾಬೊಲಯ್ಯ, ಮೂರುತಿಂಗಳು ಬಾರದೆ ಇದ್ದು, ಆನಂತರ ಬಂದರೆ ಇಷ್ಟೂ ಸ್ವಾಗತಬೇಡವೇ? ಗಂಟಲು ಒಣಗಿದರೆ ಆಗ ಮಹಾಬೊಲಯ್ಯನ ಜತೆ ತೀರ್ಥಪ್ರಸಾದ ಸ್ವೀಕರಿಸಿದರೆ ಈಶ್ವರ ತೃಪ್ತಿ ಹೆಚ್ಚಾಗಿ ಆಗುತ್ತೆ ಅಲ್ಲವೇ? ಅದಕ್ಕೇ "ಓ ಹೋ ಹೋ ಹೋ...."

ಕೊರವನ ಮೇಜಿನ ಬಳಿಯೇ ಮಹಾಬೊಲಯ್ಯ ಕುಳಿತ. ಕೊರವನ ಎತ್ತಿದ ಹುಬ್ಬನ್ನು ನೋಡಿಯೇ "ತಮಿಳು ಪಂಡಿತರೊಬ್ಬರು 2 ತಿಂಗಳು ನಮ್ಮೂರಿನಲ್ಲಿ ರಾಮಾಯಣ ಪಾರಾಯಣ ಮಾಡಿದರು. ನಾನಲ್ಲಿರಲೇಬೇಕಾಯ್ತು, ಅದಕ್ಕೇ ಇಲ್ಲಿಗೆ ಬರುಕ್ಕಾಗಲಿಲ್ಲ" ಅಂತ ಕೀರುದನಿಯಲ್ಲಿ ಮಹಾಬೊಲಯ್ಯ ಹೇಳಿದ ನಂತರ ಧ್ವನಿ ಇಂಗಿಹೋಯಿತು. ತುಟಿಗಳು ಮಾತ್ರ, ವರಮಾನತೆರಿಗೆಯವನ ಹತ್ತಿರ ಸಿಕ್ಕ ಸಾಹುಕಾರನಂತೆ, ನಡುಗುತ್ತಿದ್ದುವು.

"ಬೇರರ್" ಎಂದ ಕೊರವ. ಬೇರರ್ ಪ್ರತ್ಯಕ್ಷನಾದ. ನಾಚ್‌ಮಾಡೋರು ಮುದ್ರೆ ತೋರಿಸುಲ್ವೇ, ಹಾಗೆ ಕೊರವ ತೋರಬೆರಳು, ಹೆಬ್ಬೆರಳು ಇವುಗಳಿಂದ ಒಂದು ಸಂಕೇತ ಉದ್ಬುದ್ಧವಾಗಿ ಮಾಡಿದ. ಬೇರರ್ ನಿರ್ಗಮನ.

ತಿರುಗಿ ಬೇರರ್ ಪ್ರತ್ಯಕ್ಷವಾದಾಗ, ಎರಡು ಲೋಟಾಗಳನ್ನು ತುಂಬಿ ತಂದಿದ್ದ ಒಂದುಗುಟುಕಿಗೆ ಒಂದುಲೋಟಾ ಮುಗಿಸಿದ ಮಹಾಬೊಲಯ್ಯ, ಒಮ್ಮೆ ಕೆನೆದ.

"ತಮಿಳು ಪಂಡಿತರು ರಾಮಾಯಣ ಓದಿದರೆ, ಓದಿ ಟೀಕೆ ಮಾಡಿದರೆ ತಮಿಳಿನಲ್ಲೇ ಮಾಡ್ತಾರೆ. ನಿಮ್ಮೂರಿನವರಿಗೆ ತಮಿಳು ಬರುತ್ತ್ಯೇ" ಎಂದ ಕೊರವ

" ಮಾತಾಡುಕ್ಕೆ ಬರುಲ್ಲ, ಆದರೆ ತಮಿಳಿನಲ್ಲಿ ಮಾತಾಡಿದರೆ ಎಲ್ಲರೂ ಅರ್ಥ ಮಾಡಿಕೋತಾರೆ, ಅಂತಹ ದಿವನಾದ ಭಾಷೆ, ಪುರಾತನ ಭಾಷೆ. ಕೇಳಿಲ್ಲವೇ ಕೊರವ, ಸೀತೆ ಹತ್ತಿರ ಹನುಮಂತ ತಮಿಳಿನಲ್ಲೇ ಎಲ್ಲರೆದುರಿಗೂ ಗುಟ್ಟಾಗಿ ಮಾತನಾಡಿದನಂತೆ. ಶ್ರೀ ಪ್ರಕಾಶರು ಕೂಡ ಹೇಳಿಕೆ ಕೊಡಲಿಲ್ಲವೇ, ಈ ಬಾಬತ್ತು" ಎಂದ ಮಹಾಬೊಲಯ್ಯ. " ಹೊಸಪ್ಯಾಟಿ ಕಡೆಯವ ಹಣುಮಂತ, ಅವನ್ಹೆಂಗಾದ್ರೂ ತಮಿಳು ಕಲಿತಾನಪ್ಪ. ಅಂಥ್ಹಂಗೆ ಸೀತಾಬಾಯಿಗೆ ತಮಿಳು ಹ್ಯಾಂಗ ಬಂದಿದ್ದಾತು" ಎಂದ ಕೊರವ.

" ಎಲಾ ಮಗನ, ರಾಮಾಯಣ ಓದಿಲ್ವಾ! ನೆಪ್ಪಿ ಇಲ್ಲವಾ ಕೊರವಾ, ಆವತ್ತು ಮಾಯಾಮೃಗದ ಹಿಂದೆ ರಾಮ ಹೊಂಟ, ' ಓ ಲಕ್ಷ್ಮಣಾ ' ಅಂತ ಕೂಗು ಕೇಳಿಸ್ತು. " ನಾನು ಹೋಗುಲ್ಲ, ಇದು ರಾಕ್ಷಸರ ಮಾಯಾ ಅಂತ ಲಕ್ಷ್ಮಣ ಹಠ ಹಿಡಿದು ಪಂಚವಟೀಲೆ ಧಿಮ್ಮಗ್ರಂಗ ಅಂತ ಕುಕ್ಕರಿಸಿದ. ಕಡೆಗೆ ಸೀತಾಬಾಯಿ ತಮಿಳಿನಲ್ಲಿ ಎರಡು ಮಾತಂದಳು. ಲಕ್ಷ್ಮಣ ಕೂಗು ಬಂದ ಕಡೆಗೆ ಓಟಕಿತ್ತ" ಎಂದ ಮಹಾಬೊಲಯ್ಯ.

ನೆತ್ತಿ ಕೆರೆದುಕೊಂಡ ಕೊರವ. ತಲೆಗೆ ತೀಟೆ ಹತ್ತಿತ್ತು, ಇದು ಕೇಳಿದ ಮೇಲೆ " ಆದಕ್ಕೇ ನೋಡು ಮುಂದಾಗೋದು ಆಗಿಹೋಯ್ತು ಕೊರವ, ಸೀತಾಬಾಯೀನ ಲಂಕೆಯಿಂದ ಬಿಡಿಸಿಕೊಂಡ ಬಂದಾಗ ವಾನರ ಸೇನೆ ಸುತ್ತಲೂ ಇತ್ತು. ಅಯೋಧ್ಯೆಗೆ ಹೋಗೋತನಕ ಗಂಡಹೆಂಡಿರು ಮಾತನಾಡುಕ್ಕಾಗಲಿಲ್ಲ. ಅರಮನೇಲಿ ಮಾತನಾಡುಕ್ಕೆ ಮೊದಲು ಅವಕಾಶ ಸಿಕ್ಕಿದಾಗ ಸೀತಾಬಾಯಿಗೆ ಉದ್ವೇಗ ಹೆಚ್ಚಾಗಿತ್ತು. " ಶೆಲ್ವನ್ " ಎಂದುಬಿಟ್ಟಳು. ನ್ಯಾಯವಾಗಿ " ಆರ್ಯಪುತ್ರ" ಅನ್ನಬೇಕಾಗಿತ್ತು. ರಾಮನಿಗೆ ತಮಿಳು ಗೊತ್ತಿಲ್ಲ, ಸ್ವಲ್ಪ ಇಂಗ್ಲೀಷ್ ಕಲಿತಿದ್ದನೋ ಏನೋ ದೇವರೆ ಬಲ್ಲ. ಶಲ್ ವೆನ್ ಎಂದ ಹಾಗಾಯ್ತು.

ಆಗಲೇ ರಾಮಚಂದ್ರನಿಗೆ ಸೀತಾಬಾಯಿ ಮೇಲೆ ಅನುಮಾನ ಹುಟ್ಟಿತು ಹೀಗ್ಯಾಕೇಕೆ ಎಗರಾಡ್ತಾಳೆ ಅಂತ. ಆಮೇಲೇ ಕಾಡಿಗಟ್ಟಿದ್ದು; ಅಗ್ನಿಪರೀಕ್ಷೆ, ಇತ್ಯಾದಿ" ಎಂದು ಮಹಾಬೊಲಯ್ಯ ಮುಂದುವರಿಸಿದ.

ಆ ಹೊತ್ತಿಗೆ ಪೂರ್ಣಬೋಧಾಚಾರ್ಯರು ಆ ಮೇಜಿನ ಬಳಿಗೆ ಆಗಮಿಸಿದರು. ಮಹಾಬೊಲಯ್ಯನ ಭುಜ ಹಿಡಿದು ಜಗ್ಗಿಸಿ, ನಮಸ್ತೆ ಎಂದರು.

" ನೀ ಹೇಳಿದ್ದು ಕೇಳಿಸ್ತು, ಕಂಬದ ಆಚೆಕಡೆ ಕೂತಿದ್ದೆ, ನೀನು ಹೇಳೋದು ಸುಳ್ಳು" ಎಂದರು. ಕೊರವನ ಕಡೆ ನೋಡಿದರು. ಆಗ ಅವನ ಎಡ ಹುಬ್ಬು ಎತ್ತಿದ.

"ಸೀತಾಬಾಯಿಗೆ ತಮಿಳು ಬರ್‍ತಾ ಇದ್ದರೆ ಒಂದು ತಮಿಳು ಸಿನಿಮಾ ಹಾಡನ್ನು ಹಾಗೆ ಅಂದಿದ್ದರೆ, ಲಂಕೆಯಿಂದ ಆಕೇನ ಖಂಡಿತ ಗಡೀಪಾರು ಮಾಡುತ್ತಿದ್ದರು; ಬಂಧನದಿಂದ ಅವಳು ಸುಲಭವಾಗಿ ಬಿಡಿಸಿಕೊಳ್ಳಬಹುದಾಗಿತ್ತು.

ಅಲ್ಲದೆ ತಮಿಳು ಭಾಷಾತೀತವಾದ ವಸ್ತು. ಮಾತು ಬರದೇ ಇದ್ದವರೂ ಕೂಡ ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಅಂದ ಮೇಲೆ ಖರದೂಷಣ ಇತ್ಯಾದಿಗಳಿಗೆ ಅರ್ಥವಾಗದೇ ಇರುತ್ತಿತ್ತೇ? ಅಸಾಧ್ಯ! ಅಂದ ಮೇಲೆ ಸೀತಾಬಾಯಿಗೆ ತಮಿಳು ಗೊತ್ತಿರಲಿಲ್ಲ. ಹಣುಮಂತನಿಗೆ ತಮಿಳು ಗೊತ್ತಿತ್ತು. ವೀರ ಹಳಗನ್ನಡಕ್ಕೂ, ತಮಿಳಿಗೂ ಅನ್ಯೋನ್ಯ ಬಹಳ. ಆದರೂ ಅದನ್ನು ಸೀತಾದೇವಿಯೆದುರಿಗೆ ಪ್ರಯೋಗಿಸಿ ಆಕೆಗೆ ಮೂರ್ಛೆ ಬರುವಂತೆ ಮಾಡಲು ಅವನಿಗೆ ಇಷ್ಟವಿಲ್ಲದಿರಬೇಕು"

"ಬೇರರ್" ಎಂದ ಪೂರ್ಣ

ಸಾರ್ ಅಂತ ಬಂದ ಬೇರರ್ ಪೂರ್ಣಭೋದನ ಮುಖ ನೋಡಿಯೋ, ಒಳಕ್ಕೆ ಓಡಿಹೋದ. ಜಟ್ಟಂತ ತುಂಬಿದ ಲೋಟಾ ತಟ್ಟೆಯನ್ನು ತಂದು ನಮಸ್ತೇ ಎಂದ.

ಎಲ್ಲರ ಗಂಟಲೂ ತಂಪಾದ ಮೇಲೆ ಬೇರೆ ಮಾತಿಗೆಲ್ಲಿ ಅವಕಾಶ?

ತೆಪ್ಪಗಾದ ಕೊರವ.

—"ನಾಗರತ್ನ"

ಇದು ಭಾರತ

ಮೂವತ್ತು ಮೂರು ಕೋಟಿ
ಅವತ್ತು ಬೇಂದ್ರೆ ಹಾಡಿದ್ದು
ಇವತ್ತು ನಲವತ್ತುನಾಕು ಕೋಟಿ—ಬಾಪ್ರೆಬಾಪ್
ಏನ್ ಪ್ರಗತಿ ನಮ್ ಜನದ್ದು
ದುಡಿಮೆ ಮಾತ್ರ ಸೊನ್ನೆ
Yet there is Every hope

—ಬಿಜಾಯ್

ಪಂಚೆ ಪಂಜ್ಞಿಣಿಗಳು

ಮೈಸೂರಿನಲ್ಲಿ ಒಬ್ಬ ತುಂಟನಿದ್ದನು.
ಗೊದ್ದವನ್ನು ಬೊಜ್ಜರಡಿ ಬಿಡುತಲಿದ್ದನು

ಹಾ ಎಂದು ಕಿರುಚುತ್ತ
ಗಾಳಿಯನ್ನು ಪರಚುತ್ತ
ಅವರು ಎಗರಿದೆತ್ತರವನು ನೋಡುತ್ತಿದ್ದನು.

ನಮ್ಮ ಡ್ರೈವರ ಗಾನ, ಶಾಸ್ತ್ರೀಯ ಶುದ್ಧ !
ಹಾರ್ನಿನೊಳು ಹಾಡುಗಳ ಬಾರಿಸುವ ಸಿದ್ಧ !

ಅದ ಕೇಳಿ ದಾರಿಯೊಳು
ನಿಂತವರನೋಡಿಸಲು
ಸುಗಮ ಸಂಗೀತವನು ಅಮುಕಮುಕುತ್ತಿದ್ದ !

ನಮ್ಮೂರಿನಲ್ಲಿ ಇರುವನೊಬ್ಬ ಕಿಲಾಡಿ
ಪ್ರಾಣಿಗಳ ತಲೆಗಳಿಗೆ ಸಿಕ್ಕಿಸುವನು ಜಾಡಿ

ಅವನ ಮಾನವನೊಮ್ಮೆ
ಜಾಲಿಬಿಟ್ಟಿತು, ಎಮ್ಮೆ
ಕಚ್ಚಿ ಎಳೆಯಲು ಅವನ ನಿಕ್ಕರಿನ ಲಾಡಿ !

—ಬಿಳಿಗಿರಿ

ಒಂದೂವರೆ ಕೋಟಿ ಜನ ಕುರುಡರು ಭಾರತದಲ್ಲಿ ಇದ್ದಾರೆ.
(ಸರ್ಕಾರಿ ವರದಿ)

—ನಮಗೂ ಈ ಗುಮಾನಿ ಬಂದಿತ್ತು; ನಾಯಕರ ಭಾಷಣ, ನೀತಿ ರೀತಿಗಳನ್ನು ನೋಡಿದಾಗ.

ಮಲ್ಲೇಶಿ ಮತ್ತು ಕುಂಗ್-ಲಿ-ಪೊ

(ಮುಂದುವರೆದುದು)

'ದೇಶದ ಮೇಲೆ ಆಕ್ರಮಣವಾದುದಕ್ಕಾಗಿ ಭಯಪಡಬೇಡಿ' ಎಂದು ನಾಯಕರು ಹೇಳಿದ ದಿನ ರಾಷ್ಟ್ರದ ನಮ್ಮ ಭಾಗದಲ್ಲಿ ಗಂಡಾಂತರದ ಭಯವೆಂಬ ಸುಳಿವೇ ಇರಲಿಲ್ಲ. ಪಂಚಶೀಲ, ಶಾಂತಿಯುತ ಸಹಜೀವನಗಳ ತತ್ವಪ್ರತಿಪಾದಕರಿಗೂ ತತ್ವಕ್ಕೂ ಭಯ ಒದಗಿದ್ದಿರಬಹುದು ಅಷ್ಟೆ! ಆ ದಿನವೆಲ್ಲಾ ಭರಂಧು ವ್ಯಾಪಾರ ಮಾಡಿದ ಮಲ್ಲೇಶಿ ಸಂಜೆ ಹೊತ್ತಿಗೆ ಚಾಕಿಪೇಟೆಯಲ್ಲೆಲೋ ಸೇಲ್ಸ್ ಟ್ಯಾಕ್ಸ್ ಆಫೀಸರು ಚೆಕ್ಕಿಂಗ್ ಮಾಡುವರೆಂಬ ಸುದ್ದಿ ಕೇಳಿ

"ಬ್ಯಾಡಪ್ಪ ಈ ಪಿಟ....ಳ ಕಾಟ" ಎಂದು ಎದ್ದುಹೊರಟ. ನಂದೆಪ್ಪನ ಅಂಗಡಿಯಲ್ಲಿ ಮೆಣಸಿನಕಾಯಿ ಬೊಂಡಾ ತಿಂದು ಮನೆಗೆ ಹೋಗಿ ಸುಖವಾಗಿ ಮಲಗಿದ್ದ.

ಆದರೆ ಡಾಂಚೋಕೆ, ಟವಾಂಗ್, ಲೋಂಗ್ಜು, ಸೇಲಾಗಳ ಪತನವಾಗುವ ಹೊತ್ತಿಗೆ ಅವನಿಗೆ ಒಂದು ವಿಧವಾದ ಅನುಮಾನ ಹುಟ್ಟಿತು.

"ಅಲ್ರೀ ರಾಯ್ರೇ, ನಮ್ಮರು ಹಿಂಗೇ ಹಿಂದೆ ಸರ್ಕಂತ, ಸರ್ಕಂತ ಎಲ್ಲಿವರಿಗೆ ಬರ್ತ್ರೀ?"

"ಯಣಾ, ಹಂಗಾಗೋದುಲ್ಲ. ಆದ್ರೆ ಕೆಲವು ದಿನ ಹಿಂಗೇ ಸೈ" ಎಂದೆ ನಾನು.

"ಈಗ ಹದ್ನೈದು ದಿನಾತು, ಇನ್ನೂ ಇವರು ಓಡಿ ಬರ್ತೇನೇ ಆದರೆ. ನಮ್ಮಿಂಡಿಯಾದರು ಸೂಗರು ತಗಿರಿ."

"ಛೇ ಛೇ ಹಂಗನ್ಬ್ಯಾಡ ಮಲ್ಲೇಶಣ್ಣಾ. ನಮ್ಮೂರು ಸೂರರು. ಏನ್ಮಾಡ್ತೀ...."

ಅದೆಂಥಾ ಮಾತು ತಗಿರಿ. ಯುದ್ಧದಗೆ ಸೋತ್ಗಂತಲೇ ಇರರು ಎಂಥಾ ಸೂರರು?"

"ಹಂಗಲ್ಲಾ, ಚೀಣಾದರು ಈಗ ಹತ್ತು ವರ್ಷದಿಂದ ತಯಾರಿ. ನಮ್ಮೂರು ಇವತ್ತು ಕೂಡಾ ಯುದ್ಧ ಬ್ಯಾಡ ಅಂತರೇ."

"ಅವರು ಹತ್ತು ವರ್ಸದಿಂದ ತಯಾರಿ ಆಗಿದ್ರೆ ಇವ್ರೇನು ಮುಂಡಕ್ಕಿ ಉಂಡೆ ತಿಂತಿದ್ರೇನ್ರಿ? ನಮ್ಮ ಕೃಷ್ಣಮೆನನ್ ಅಂಥಾನು ಇಂಥಾನು, ಭಾರೀ ತಲೆಗಾರ ಅಂತರೇ"

" ಯಾರು ?"

" ನಮ್ಮ ಕುಂಗಾ."

" ಅವನೊಬ್ಬ ನಿನಗೆ ಆಥಾರಿಟಿ ಅಲ್ಲೇ !"

" ಅದು ಹೋಗಲ್ರೀ. ಈಗ ವಾರ್ ಏನಾಕ್ಕತೇ ಅಂತಿರಿ."

" ನನಗೇನು ಕನಸು ಬೀಳ್ಬುಕೇ ?"

" ಮತ್ತೆ. ಹಿಂಗೇ ನಡೀತಿದ್ರೆ ನಮ್ಹತ್ರ ರೊಕ್ಕಲ್ಲೈತ್ರೀ."

" ಹೊಟ್ಟೆ ಬಟ್ಟೆ ಕಟ್ಟಿ ಕೊಡ್ಬುಕಪಾ. ದೇಶ ನಮ್ಮದು ಅಂತೀ. ನಿನಗೆ ಎಲ್ಲಾ ಅನ್ಕೂಲಾನೂ ಬೇಕು. ರೊಕ್ಕ ಕೊಡಕ್ಕೆ ಮಾತ್ರ ವಲ್ಲೆ,"

ಅಲ್ರೀ ಇಷ್ಟ್ ದಿನಾ ಕೊಟ್ಟ ರೊಕ್ಕ ಏನಾತ್ರೀ"

" ಇದೇನಯ್ಯ ಹಿಂಗೆ ಕೇಳ್ತೀ N. E. S., ವಿದ್ಯಾಭ್ಯಾಸ, ಪಾನನಿರೋದ ಮೊದಲಾದ ಕೆಲಸಕ್ಕೆ ಕಡ್ಮಿ ರೊಕ್ಕ ಹೋಕ್ಕತೆ ಅಂತ ತಿಳ್ದದಿಯಾ ?"

" ಡಿಫೆನ್ಸ್ ಪಂಡು ಅಂತ ಹೊಂಟರಲ್ಲಾ ಅದಕ್ಕೆ ನಾವೂ ಕೊಡ್ಬುಕೇನೂ ರೊಕ್ಕಾ ?"

" ಹೂ"

" ಮತ್ತೆ ನಮ್ಮನ್ಯಾಕೆ ಕೇಳಲ್ಲ ? ಇಷ್ಟ್ ಮಂತ್ರಿಗಳು ಬಂದಿದ್ರಲ್ಲಾ ಒಬ್ರೂ ನನ್ಹತ್ರ ಬಂದಿಲ್ಲ. ಅಲ್ರೀ ಜನಾನ ಕೇಳಧಂಗೆ ಇವರು ಸುಮ್ನೆ ಟೂರ್ ಮಾಡಿ ತಮಗೆ ತಿಳಧತ್ರ ಕೇಳ್ಕಂತ ಹೋಗ್ತರಲ್ಲಾ ತಪ್ಪಲ್ಲೇನ್ರಿ ಆದು. ನಮ್ಮ ರೊಕ್ಕ ದುಡ್ಡದ್ರೀ. ಕೇಳದನೆ ಹೆಂಗೆ ಕೊಡನಾ ?"

ಹೀಗೆ ಮಲ್ಲೇಶಿ ನನ್ನ ಜೊತೆಗೆ ಆರಂಭಿಸಿದ ಸಂಭಾಷಣೆ ಇಷ್ಟು ನೀರಸವಾಗಿ ಕೊನೆಗಾಣಲು ಕಾರಣ ನೀವು ಊಹಿಸಿರಲಾರಿರಿ. ನಿಮ್ಮ ಅವಗಾಹನೆಗಾಗಿ ತಿಳಿಸ ಬೇಕೆಂದರೆ ಆ ಕ್ಷಣದಲ್ಲಿ ಅವನ ಮನಸ್ಸು ಬೆಲ್ಲ ಸಕ್ಕರೆ ವೇಸ್ಟ್ ನ್ಯೂಸ್‌ಗಳಲ್ಲಿ ತೊಡಗಿತ್ತು.

ಈ ವರ್ಷ ಬೆಲ್ಲಕ್ಕೆ ದೆಸೆ ಬಂದಿದೆ. ಎಂಟು ಹತ್ತು ವರ್ಷಗಳಿಂದ ಸತ್ತು ಹೋಗಿದ್ದ ಬೆಲ್ಲ ಹೋದ ವರ್ಷದ ಆದಿಯಲ್ಲಿ ಕಾಯಕಲ್ಪ ಹೊಂದಿ ಪುಟದೆದ್ದಿತು. ಆದರೆ ಮಲ್ಲೇಶಿ ಈ ವರ್ಷ ಕೊಲ್ಹಾಪುರ ಬೆಲ್ಲದಲ್ಲಿ ನಾಲ್ಕು ಸಾವಿರ ಕೈಕಚ್ಚಿಸಿಕೊಂಡ ಉತ್ತರ ಇಂಡಿಯಾದ ಬೆಲ್ಲ ತರಿಸಿದರೆ ಎರಡು, ಎರಡೂವರೆ, ಚೌರವಾಯಿತು. ಮತ್ತೆ ಇನ್ನೆಂಥಾ ಪಿಟ....ಳು ಈ ಬೆಲ್ಲದಲ್ಲಿ ವ್ಯವಹಾರ ಮಾಡಬೇಕೊ" ಅವನಿಗೆ ತಿಳಿಯಲಿಲ್ಲ.

" ಸಕ್ರೆ ಒಳಗೈತೆ" ಎಂದು ಭ್ರಮೆ ಹೊಂದಿದ್ದ ಮಲ್ಲೇಶಿಗೆ ಭ್ರಮ ನಿರಸನ ವಾಗಲು ಬಹುಕಾಲ ಬೇಕಾಗಲಿಲ್ಲ. 'ಲೋಕವಾರ್ತೆಯನ್ನು ಕೇಳದಿರಿ. ಆಕಾಶ ವಾಣಿಯನ್ನು ಕೇಳಿ' ಎಂದು ತಾರೀಫು ಮಾಡಿಸಿಕೊಂಡ ಆ ಮಹತ್ ಸಂಸ್ಥೆ

' ಗೊರ್‌ರ್‌ರ್‌ ಆಕ್... ಕ್ರ್ ರ್ ರ್....ಕ್ಕರೆದವರನ್ನು (ಕ್ಷಮಿಸಿ) ದರ ಹೆಚ್ಚಾದರೆ ಹೆಚ್ಚು ಸಕ್ಕರೆ ಬಿಡುಗಡೆ ಮಾಡಲಾಗುವುದು ' ಎಂದ ಕೂಡಲೇ,

" ಅಲ್ರೀ ರಾಯ್ರೀ ನನ್ನ ಪ್ಲಾನಿಗೆ ಬಂತಲ್ರೀ ಉರ್‍ಲು ನಾನು ಹಿಂಗೆ ಏಚ್ನೆ ಮಾಡೇನು ಅನ್ನದು ಅವರಿಗೆ ಹೆಂಗ್ ಗೊತ್ತಾತು ? ಹುಷಾರದರ್‍ರೀ." ಎಂದುಬಿಟ್ಟ ಮಲ್ಲೇಶಿ. ಸಕ್ಕರೆಯನ್ನು ಮರೆತಹಾಗಾಯಿತು. ಇನ್ನು ಉಳಿದುದು ವೇಸ್ಟ್ ನ್ಯೂಸ್.

ಕೆಲವು ದಿನಗಳ ಹಿಂದೆ ಕುಂಗ್-ಲಿ-ಪೋ ಬಂದಿದ್ದ.

" ನೀವು ಹತ್ತು ಮಣ ನ್ಯೂಸ್ ಕೊಂಡುಕೊಂಡರೆ ಜೊತೆಗೆ ಎರಡು ಮಣ ಸಣ್ಣ ಪತ್ರಿಕೆಯನ್ನು ಕೊಳಬೇಕಾಗುತ್ತದೆ. "

" ಇನ್ನೇನೋ ತಂದ್ನ ಪಾ ತಾಯ....ಕ! ಸೆಂಟ್ರಲ್ ಸೇಲ್ಸ್ ಡಿಪೋ ಮ್ಯಾನೇಜರ್ ಇದ್ದಂಗೆ. ಐದು ಚೀಲ ಅಕ್ಕಿ ತಗಂಡ್ರೆ ಐದು ಚೀಲ ಗೋಧಿ ತಗೋ ಅಂತನಲ್ಲ. ಅದೆಲ್ಲಾ ಆಗದಿಲ್ಲೋ ಕುಂಗಾ ಪಿ....ಕೆ!"

" ಆಗಲೇಬೇಕು. ಇಲ್ಲದಿದ್ದರೆ ಬಿಲ್ ಕೊಡಲೇಬೇಕಾಗುತ್ತೆ."

" ಹಂಗೆಲ್ಲಾ ಮಾಡ್ಬ್ಯಾಡೋ ಭೊ....ಕೆ, ದೂರ್ದೇಶಕ್ಕೆ ಬಂದದಿ. ಒದ್ದು ಉಪ್ಪಿನ್ಕಾಯಿ ಹಾಕಿದ್ರೆ, ಹುಚ್ನಾಯಿನೂ ಮೂಸಿ ನೋಡಕ್ಕಿಲ್ಲ."

" ನಿಮಗೇನು ಲಾಭ? ಎಂಟು ಸಾವಿರ ಟ್ಯಾಕ್ಸ್ ಬಿದ್ದೀತು?" ಮಲ್ಲೇಶಿ ಸುಮ್ಮನಾದ. ಕುಂಗ್-ಲಿ-ಪೋ ಕೋಟಿನ ಜೋಬಿನಲ್ಲಿ ಕೈಯಿಟ್ಟು ಏನನ್ನೋ ಟಿಕ್ ಎನ್ನಿಸಿದ.

" ಎಂಥಾ ಟ್ಯಾಕ್ಸೊ, ಏನೋ. ಏನು ಸರ್ಕಾರವೊ ಏನೋ?....ಕುಂಗಲೇ ಏನೋ ಗೊಯ್ ಅಂತತಲ್ಲೋ ಏನಲೇ? ನೋಡೋ ಟೇಬಲ್ ಕೆಳಗೆ."

" ಏನೂ ಇಲ್ಲ ಮಲ್ಲೇಶಪ್ಪನವರೇ. ನಿಮ್ಮ ದೇಶ ಮುಂದುವರಿಯುತ್ತಿದೆಯಲ್ಲಾ?"

" ಏನ್ಮುಂದ್ವರಿತ ತಲೇ ಮಂಗಾ? ಭಾಷ್ಣ ಮಾಡಿದ್ರೆ ಮುಂದ್ವರಿತತೇನ್ಲೇ?"

" ನೆಹರೂರವರು...."

" ನನ್ನಂಥರು ನಿನ್ನಂಥರು ಇರ್‍ಬೇಕಾರೆ ಅವನಿಂದ ಏನಾಕ್ಕತೋ?"

" Thanks ಅಣ್ಣ " (' ಗೊಯ್ ' ಎನ್ನುವ ಸದ್ದು ನಿಂತು ಹೋಯ್ತು) ಒಂದಲ್ಲ ಒಂದಿವ್ಸ ಜೈಲಿಗೆ ಬಿದ್ದಿಯಿಲೇ ಥ್ಯಾಂಕ್ಸ್ ಗೀಂಕ್ಸು ಹೇಳಬ್ಯಾಡ, ನನ್ಹತ್ರ ಬರಬ್ಯಾಡ. ನಮ್ಮಂಗ್ಡಿ ಹಮಾಲರಿಗೆ ಸಿಟ್ಬಂದ್ರೆ ನಿನ್ನ ತೌಡು ಹರ್‍ದಾರು. ಹೋಗಿ ಒಂದಿಷ್ಟು ಒಳ್ಳೇ ನ್ಯೂಸ್ ಕಳ್ಸು. ಒಂದ್ಮಣ ಸಣ್ಣ ನ್ಯೂಸ್ ಕಳ್ಸು. ಸಾಕು ನೋಡನಂತೆ ಮುಂದೆ."

" ಆಗಲಿ" ಎಂದಿದ್ದ ಕುಂಗ.

ಆದರೆ ವಾಸ್ತವತಃ ಅವನು ಐದು ಮಣ ದೊಡ್ಡ ನ್ಯೂಸ್ ಪೇಪರ್ ಜೊತೆಗೆ ಐದು ಮಣ ಸಣ್ಣ ನ್ಯೂಸ್ ಕಳಿಸಿದ್ದ. ರಂಗು ರಂಗಿನ ಬಣ್ಣದ ಚಿತ್ರಗಳಿದ್ದರೂ ಅವನ್ನು ಐದು ರೂಪಾಯಿಗಳಿಗಿಂತ ಹೆಚ್ಚು ದರಕ್ಕೆ ಯಾರೂ ಕೊಳ್ಳಲಿಲ್ಲ. ಈ ನಡುವೆ ಕುಂಗ, ಮಲ್ಲೇಶಿಗೆ ಒಂದು ಸಾವಿರ ರೂಪಾಯಿ ಕೈಗಡ ಕೇಳಿದ. ಮಲ್ಲೇಶಿ ಅದನ್ನು ಕಳಿಸಿಯೂ ಇದ್ದ. ನಾಳೆ ಅವನು ಎರಡು ಸಾವಿರ ಕೇಳಿದರೆ?....

ಹೀಗಾಗಿ ಮಲ್ಲೇಶಿ ನನ್ನ ಜೊತೆಯ ಸಂಭಾಷಣೆಯಲ್ಲಿ ಅಪರು ತಪರಾಗಿ ತೊಡಗಿದ್ದಕ್ಕೆ ಕಾರಣವಿಲ್ಲದಿರಲಿಲ್ಲ.

* * * *

" ಚು ಶೂಲ್ ಇನ್ನೂ ನಮ್ಮ ವಶದಲ್ಲೇ ಇದೆ...." ಆಕಾಶವಾಣಿಯ ಬಾಲೆ ಹೇಳಿದ್ದ ಮಾತು ನಮ್ಮಿಬ್ಬರ ಕಿವಿಗೆ ಬಿತ್ತು.

" ಅಂದ್ರೆ ನಾಳೆ ಅದೂ ಹೋಗ್ತತೆ ಅಂತಲೋ ಏನ್ರೀ ಅದು ? "

" ಕೇಳು ಅವರ್ನೇ " ಎಂದೆ ನಾನು.

" ಸೇಲಾ ಹೋತು, ಬೊಮ್ಡಿಲ್ಲಾ ಒಳ್ಗೆ ಬೊಂಡಿ ಹೊಡೆದ್ದು ತಗೀರಿ ಇವ್ರೆಂಥ ಯುದ್ಧ ಮಾಡ್ತರೆ ಸೂ ...ಳು ಮೊದ್ಲು ಈ ಮೆನನ್ ತಗಿಬುಕು ಕಣ್ರೀ. ಭರ್ಜರಿ ಒಂದಿಪ್ಪತ್ಸಾವ್ರ ಜನನ ಬಂದುಕು ಗಿಂದುಕು ಎಲ್ಲಾ ಕೊಟ್ಟು ಸಜ್ ಮಾಡಿ ಕಳ್ಸ್‌ಬುಕು. "

ಅದು ಸರ್ಕಾರಕ್ಕೂ ತಿಳಿತತಪಾ. ಏನ್ ಮಾಡ್ತಿ. ಪರ್ವತ, ಮಂಜು, ಕಾಡು ಮೇಡು ಛಳಿ ಒಳ್ಗೆ ಜನ ಕಳ್ಸಿದ್ರೆ ಅವ್ರಿಗೆ ಹಿಂದೆ ಸಹಾಯಕ್ಕೆ ಜನ ಸಾಮಾನು ಸಾಗ್ಸಕ್ಕೆ ರಸ್ತೆ, ಯುದ್ಧ ಮಾಡಕ್ಕೆ ಆಯುಧ, ಬೇಕು ಅಂತಿಯೋ ಬ್ಯಾಡ ಅಂತಿಯೋ. "

" ಇವ್ರು ಸಜ್ಜಾಗಹೊತ್ತಿಗೆ ಅವ್ರು ಇಲ್ಲೀತಂಕ ನುಗ್ಗಿ ಬಂದ್ರೂ ಆನ್ನಪ್ಪ. ಅದೂ ಆಕ್ಕತೆ ಅಂತಿಯಾ ? "

" ನಾರ್ತಿಂಡಿಯಾ ಜನ, ನಮ್ಮ ಸೈನ್ಯ ಏನು ಸೂಗ್ರು ಅಂತ ಅಂದ್ಕಂಡ್ಯಾ, ಈಗಿನ್ಕಾಲ್ದಗೆ ಜನ ಬಂದ ಶತ್ರುಗಳ್ನ ಬರ್ರಪ್ಪ ಅಂತ ಕರ್ದು ಕೂಡಿಸ್ಗಂತರೇ ಅಂದ್ಕಂಡ್ಯಾ. "

" ಮತ್ತಿಷ್ಟು ದಿನ ಏನಾತು ? "

" ಹಿಂಗೆ ಇರದಿಲ್ಲ ಕಾಲ. ಬದ್ಲಾಕ್ಕತೆ. ಒಂದು ಪಕ್ಷ ಬಂದ್ರೂ ಅಂತ ಇಟ್ಗೋ. ನೀನು ಸುಮ್ನೆ ಇರ್‍ತಿಯೋ ? "

ಮಲ್ಲೇಶಿ ಮೌನವಾಗಿದ್ದ. ಹಾದು ನಮ್ಮ ಸರ್ಕಾರ ಟ್ಯಾಕ್ಸ್ ಕೊಡು ಎನ್ನುತ್ತದೆ. ಆದರೆ ಲೋನೂ ಕೊಡುತ್ತದ್ಲೂ ಕೊಡಲಿ ಬಿಡಲಿ ಇದು ನಮ್ಮ ಸರ್ಕಾರವೇ ಅಲ್ಲವೇ ? ನಮ್ಮ ದೇಶವೇ ಅಲ್ಲವೆ. ಅವನು ಬಂದರೆ ಏನು ಸ್ವರ್ಗ ಬಂದೀತು.


ಒಮ್ಮೆ ಕುಂಗ ಹೇಳಿದ್ದ "ನಿಮ್ಮ ಜನ ಬಹಳ ದುಂದುಗಾರರು. ಸತ್ತ ಇಲಿ, ನಾಯಿ, ಕೊಳೆತ ಹಣ್ಣು ಎಲ್ಲವನ್ನೂ ಹಾಳುಮಾಡುತ್ತಾರೆ. ನಮ್ಮ ದೇಶ ಭೂತಲ ಸ್ವರ್ಗ. ಅಲ್ಲಿ ಇವೆಲ್ಲಾ ಅಮೃತ"....

ಈ ನಾಯಿ ತಿನ್ನುವ ಜನರ ಸಹವಾಸ ಬೇಡ.

"ನಾನ್ಯಾಕೆ ಸುಮ್ನಿದ್ದೇನು ಗಾಬು ಜಗಿತಿನಿ" ಎಂದ ಮಲ್ಲೇಶಿ.

(ಸಶೇಷ)

—ಆ. ರಾ. ಸೇ.



ಕೆ. ಕೆ. ಷಾ ಹೇಳಿದ್ರಲ್ಲ! ಟೋಪಿ ಬೆಲೆ ಇಳಿದುಹೋಯ್ತು ಅಂತ! ಇನ್ಮೇಲೆ ಜೀವನಕ್ಕೆ ಏನ್ಮಾಡೋದ್ರಿ! ಸಂಸಾರ ದೊಡ್ಡದು ??

ಕಣ್ಣಿಗೆ ಬೂದಿಯಿದು!

ಕಣ್ಣಿಗೆ ಬೂದಿಯಿದು—ನಮ್ಮ ಕಣ್ಣಿಗೆ ಬೂದಿಯಿದು
ಲೋಕ ಶಾಂತಿಯ ಕುರಿತು ಲೇಶ ಭಕುತಿಯಿಲ್ಲ ||
ಕಡೆಗೊಮ್ಮೆ ಕಾಲ್ತೆಗೆದು ಗಡಿಯಾಚೆ ನೆಗೆಯುತ್ತ
ಸಾವಾಗಿ ನಡೆದೆವೆಂದು ಕೊಚ್ಚುತಲಿ
ಶಾಣ್ಯಾ ಗೀಣ್ಯಾನೆಲ್ಲ ಉದ್ದಕ್ಕೆ ಕಟ್ಟಿಕೊಂಡು
ಅರಿಯದ ದೇಶಗಳಿಗಾಶ್ಚರ್ಯ ತೋರುವುದು || ಕಣ್ಣಿಗೆ—
ಹೊಂಚುಗಾರರಾ ಪಾಳಿಯದಂದದಿ
ಕೆಂಚು ಕ್ರಿಸ್ಲಿಂಗ್‌ಗಳಿಗೆ ಕುಮ್ಮಕ್ಕು ಕೊಡುತ
ಮಿಂಚಿನಂತಡಿಗಡಿಗೆ ಹೇಳಿಕೆ ನೀಡುತ
ವಂಚನೆಯಲಿ ಪಂಚಶೀಲ ಬಾರಿಸೋದು || ಕಣ್ಣಿಗೆ—
ಕಂಕುಳ ಬಂದೂಕು ಬಾಯೊಳು ಶಾಂತಿಯು
ಸಹಜೀವನ ಮುಸುಕ ಮೋರೆಗೆ ಹಾಕಿ
ಪರರ ನೆಲಗಳನ್ನು ಗಳಿಸ ಚಿಂತಿಸುತೆ
ಪರಮ ಸಂಭಾವಿತ ಮೂರ್ತಿಯೆನಿಸುವುದು || ಕಣ್ಣಿಗೆ—
ಬೂಟಕ ತನದಲಿ ಬಲು ಬಲು ಮಾತಾಡಿ
ನೋಟಕೆ ಇವನಿಗೆ ಸರಿಯಿಲ್ಲೆನಿಸಿ
ಜಾರೆಯ ತರ ನುಡಿದು ಬಯಲು ಡಂಬವ ತೋರಿ
ಹೆರರನು ನುಂಗುವ ಮಾರ್ಗವಿದಲ್ಲದೆ || ಕಣ್ಣಿಗೆ—
ಸ್ವಾಹಾ ಎಂಬುದ ಬಿಟ್ಟು ಮಿತ್ರರಂತೊಡಗೂಡಿ
ಸಾಚಾ ದೋಸ್ತಿನ ಲಕ್ಷಣವರಿತು
ಒಳಗೊಂದು ಹೊರಗೊಂದು ಇಲ್ಲದೆ ಶಾಂತಿಯು
ಬಯಸದೆ ನಡೆವ ದೊಂಬರಾಟವಿದೆಲ್ಲವು || ಕಣ್ಣಿಗೆ

—ರಾಮಿ.

"ಎಲ್ಲಾ ಒಳ್ಳೇದಕ್ಕೆ"

ಹೆಂಡತಿ:

'ಕೇಳಿದ್ರ ಲಕ್ಷಮ್ಮನೋರೆ ಸಮಾಚಾರಾನ....'

'ಯಾವ ಸಮಾಚಾರ ಮೀನಾಕ್ಷಮ್ಮ?

'ಅದೇ, ರಾಘುರಾಯರ ಮಗನಿಗೆ ಮದುವೆ ಆಗಲಿಲ್ಲವೇ?

'ಹೂ....ಮೊನ್ನೆ ವಾಸವಿನಿಲಯದಲ್ಲಿ ಆಯಿತಲ್ಲಾ....ನಮ್ಮ ಸುಂದ್ರಮ್ಮನ ಮಗಳು ಗೌರೀನ ಕೊಟ್ಟು....ಹೂಂ ಈಗ ಏನಾಯಿತು.

'ಅದೇರೀ....ಆ ಹುಡುಗನಿಗೆ ಎಂತೆಂತಾ ಕಡೆಯಿಂದಲೋ ಹೆಣ್ಣುಗಳು ಬಂದಿತ್ತು....ಒಂದೂ ಒಪ್ಪಲಿಲ್ಲ....ಆದರೆ ಸುಂದ್ರಮ್ಮನವರು ನಾವು ಹುಡುಗೀಗೆ ಚಿನ್ನದ ಪದಕ, ಚಿನ್ನದ ಡಾಬು ಅದು ಇದು ಹಾಕ್ತೀವಿ ಅಂತ ಹೇಳಿದರು....'

'ಮತ್ತೆ ಮದುವೇಲಿ ಹಾಕೆ ಇರಲಿಲ್ಲ'

'ಹೂಂ ಕಣ್ರೀ....ಹಾಕೋಕೆ ಅವರೇನು ಲಕ್ಷಾಧಿಪತಿಗಳೇ....ಅವರು ಹೇಳಿದ್ರು ನಾವು ಚಿನ್ನದ ಒಡವೆ ಹಾಕ್ತಾ ಇದ್ದಿವಿ ಆದರೆ ಏನು ಮಾಡೋದು ಈಗ ಚಿನ್ನ ತೊಗೊಳ್ಳೋ ಹಾಗೂ ಇಲ್ಲ, ಮಾರೊ ಹಾಗೂ ಇಲ್ಲ ಅಂತ ಹೇಳಿ ಎಲ್ಲಾ 'ರೋಲ್ಡ್ ಗೋಲ್ಡ್' ಒಡವೆ ಹಾಕಿದರು....ಮದುವೇನೂ ಕಮ್ಮಿ ಖರ್ಚಿನಲ್ಲಿ ಮುಗಿಸಿದರು. ಅಂತೂ ಆ ಚೀಣಿಯವರು ಬರ್ತೀವಿ ಅಂತ ಹೇಳಿದ್ದು ಒಳ್ಳೇದಕ್ಕೆ ಅನ್ನಿ....'

'ಹೌದಮ್ಮ, ಆಗೋದೆಲ್ಲಾ ಒಳ್ಳೇದಕ್ಕೆ'....ನಾನು ಈ ತಿಂಗಳೇ ನಮ್ಮ ರುಕ್ಮಿಣಿ ಮದುವೆ ಮಾಡಿಬಿಡ್ತೀನಿ....

* * * *

ಗಂಡ:

'ಏನು ರಾಮರಾಯ್ರೇ, ಬಹಳ ಸಂತೋಷವಾಗಿದ್ದೀರಲ್ಲ....'

'ಮತ್ತೆ ಸಂತೋಷ ಪಡೋ ಕಾಲದಲ್ಲಿ ದುಃಖ ಪಡೋಕೆ ನಾನು ಏನು ಮೂರ್ಖನೆ'

'ಅದೇನು ಸ್ವಾಮಿ? ಅಂಥ ಸಂತೋಷದ ಸಮಾಚಾರ'

'ಇವತ್ತು ಸಂಬಳ ಬಂತು....ನನ್ನ ಕ್ಲಬ್ಬಿನ ಸಾಲ, Hotel ಸಾಲ ಎಲ್ಲಾ ತೀರಿಸಿಬಿಟ್ಟೆ'

‘ ಅದು ಹೇಗೆ ’

‘ ಅಲ್ಲಾ ಗೋವಿಂದರಾಯರೇ....ಇಷ್ಟು ದಿನ ಸಂಬಳ ತೊಗೊಂಡು ತಕ್ಷಣ ಹೆಂಡತಿ ಮಾತಿಗೆ ‘ ಕೋಲೆ ಬಸವನಂತೆ ’ ಹೂಂ ಅಂದುಕೊಂಡು ಅವಳಿಗೆ ಚಿನ್ನದ ಬಳೆ, ಕಾಫಿ ಬೀಜದ ಸರ ಅಂತ ಹೇಳಿ ದುಡ್ಡು ಕೊಟ್ಟು ಬಿಡುತ್ತಿದ್ದೆ....ನನ್ನ ಕೈಲಿ ಮೂರುಕಾಸು ಉಳಿತಿರಲಿಲ್ಲ....

‘ ಈಗ ! ’

‘ ಈಗ ಹಾಗಲ್ಲಾ....ನಾವು ಚಿನ್ನಾನ ತೆಗೆದುಕೊಳ್ಳೋ ಹಾಗೆ ಇಲ್ಲ . ಹಾಗಿರುವಾಗ ಇನ್ನು ಚಿನ್ನದ ಒಡವೇ ಹೇಗೆ ಮಾಡಿಸೋಕೆ ಸಾಧ್ಯ? ಆದ್ದರಿಂದ....ಈಗ ದುಡ್ಡು ನನ್ನ ಕೈಲೆ ಇರುತ್ತೆ ಯಾವುದಕ್ಕೂ ಯೋಚನೆ ಪಡೋ ಹಾಗಿಲ್ಲ ...ಅಂತೂ ಆ ಚೀಣೀಯರು ಬರ್ತೀವಿ ಅಂತ ಹೆದರಿಸಿದ್ದು ಒಳ್ಳೇದೆ ಆಯ್ತು ಅನ್ನಿ ’....

‘ ಕೇಳಿಲ್ಲವೇ....’ ಎಲ್ಲಾ ಒಳ್ಳೇದಕ್ಕೆ ’....

ಮಗ :

‘ ನೋಡಿದ್ಯೇನೊ....ಮುಂದಿನ ವರ್ಷದಿಂದ M.B.B.S.ನ್ನೂ ಇಂಜನಿಯರಿಂಗ್ ಮೂರೇ ವರ್ಷವಂತೆ ’....

‘ ಹೌದಮ್ಮ ಈ 4-5 ವರ್ಷ ಓದೊ ಹೊತ್ತಿಗೆ ನಮಗೆ ಬೇಜಾರಾಗಿರೋದು ’ ‘ ಅಂತೂ ಆ ಚೀಣಾದವರು ಬರ್ತೀವಿ ಅಂತ ಹೆದರಿಸಿದ ಮೇಲೆ....ಯೂನಿವರ್ಸಿಟಿಯವರಿಗೂ ಕಾಲದ ಬೆಲೆ ತಿಳೀತಲ್ಲಾ! .. ಒಳ್ಳೇದೆ ಆಯ್ತು’ ಗೊತ್ತಿಲ್ಲವೇನೊ ‘ ಎಲ್ಲಾ ಒಳ್ಳೇದಕ್ಕೆ ’

—ಕೆ. ನ. ರ.

ಅಗ್ನಿಶಾಮಕ ದಳದವರು ಒಂದು ನಿಮಿಷದಲ್ಲಿ ಸಮವಸ್ತ್ರವನ್ನು ಧರಿಸಬಲ್ಲರಂತೆ–

—ಅದಕ್ಕೇ ಆ ದಳದಲ್ಲಿ ಹೆಂಗಸರು–ಇಲ್ಲ !!

* * * *

ಬಿಳಿ ಹುಲಿಗಳನ್ನು ಸಾಕಲಾರದೆ ಕಾಡಿಗೆ ಬಿಡುತ್ತೀನಿ, ಎಂದು ಮಹಾರಾಜಕುಮಾರರು ಬೆದರಿಕೆ ಹಾಕಿದ್ದಾರಂತೆ.

—ಬಿಳಿ ಹುಲಿಗಳನ್ನ ಕರಿಕಾಡಿನಲ್ಲಿ ಬಿಡಬಹುದೆ? ಯೂರೋಪಿಗೆ ಸಾಗಿಸಿಕೊಂಡು ಹೋಗಿ ಬಿಳಿ ಕಾಡುಗಳಲ್ಲಿ ಬಿಡಬಾರದೇ!

* * * *

ನಮ್ಮ ರಾಷ್ಟ್ರೀಯ ಪಕ್ಷಿ

ನಮ್ಮ ರಾಷ್ಟ್ರೀಯ ಹಕ್ಕಿಯ ಪಟ್ಟವನ್ನು ಮೊನ್ನೆ ಮೊನ್ನೆ ನವಿಲಿಗೆ ಕಟ್ಟಿದರಲ್ಲ. ತುರ್ತು ಪರಿಸ್ಥಿತಿ ಈ ನಿರ್ಧಾರಕ್ಕೆ ತಡೆಯಾಗದಿದ್ದುದು ಸಂತೋಷದ ವಿಷಯ. ಪ್ರಾಯಶಃ ನವಿಲು ನಮ್ಮ ರಾಷ್ಟ್ರೀಯದ ಈಗಿನ ಲಕ್ಷಣಗಳನ್ನು ಸರಿಯಾಗಿ ಬಿಂಬಿಸುತ್ತೆಂಬುದರಿಂದಲೋ ಏನೋ ಬೇಗನೆ ಅದನ್ನೇ ಆರಿಸಿರಬೇಕು.

ಈ ನಿರ್ಧಾರ ಕೇಳಿದ್ದರಿಂದಲೋ ಏನೋ ನಮ್ಮೂರಿನ ಕಾಗೆಗಳೆಲ್ಲ ಒಂದು ಮರದ ತುಂಬ ಕವಿದು ಕುಳಿತು ಪ್ರತಿಭಟನೆ ಸೂಚಿಸಿದುವು. ದೇಶದ ಮೂಲೆ ಮೂಲೆಯಲ್ಲೆಲ್ಲ ಕಂಡುಬರುವ ತಮ್ಮನ್ನು ಅಲಕ್ಷಿಸಿದುದು ಕೇವಲ ಅನ್ಯಾಯ ಎಂದು ಅವು ಕಾಕರಿಸಿದ್ದೇ ಕಾಕರಿಸಿದ್ದು. ತುರ್ತು ಪರಿಸ್ಥಿತಿಯಲ್ಲಿ ಅಂತಹ ಪ್ರತಿಭಟನೆ ಕೂಡದೆಂದು ಅವಕ್ಕೇನು ಗೊತ್ತು?

ಆದರೆ ಹುಂಜಗಳಿಗೆ ಅಂತಹ ಅಸಮಾಧಾನ ಉಂಟಾಯಿತೋ ಇಲ್ಲವೋ ತಿಳಿಯಲಿಲ್ಲ. ಜಂಬಕ್ಕೆ ಹೆಸರಾದ ತನ್ನನ್ನು ಮರೆತಿದ್ದು ಆಶ್ಚರ್ಯವಲ್ಲವೆಂದು ಅದಕ್ಕೆ ಅನಿಸಿರಬೇಕು. ಚೀಣೀಯರು ರಸ್ತೆ ಅಗೆದುಕೊಂಡು ನಮ್ಮ ಬೇಲಿ ನುಗ್ಗಿದ ಮೇಲೆ ನಮ್ಮ ಜಂಬವೆಲ್ಲ ಉಡುಗಿಹೋಗಿರಬಹುದೆಂದು ಅದರ ಭಾವನೆಯಿರಬೇಕು. "ನಿಮ್ಮಲ್ಲಿರುವ ಜಂಬ ಏನೇನೂ ಸಾಲದ್ದರಿಂದ ನಾನು ನಿಮ್ಮ ರಾಷ್ಟ್ರೀಯ ಹಕ್ಕಿಯಾಗಲಾರೆ" ಎಂಬ ಮರ್ಜಿಯಲ್ಲಿ ಅದು ಕಾಲು ಹಾಕುತ್ತಿರುವುದನ್ನು ಕಾಣಬಹುದು.

ಗಬ್ಬಿಲಕ್ಕೂ ನಮ್ಮ ರಾಷ್ಟ್ರೀಯ ಹಕ್ಕಿಯಾಗಬೇಕೆಂದು ಆಸೆಯಿದ್ದಿರಬಹುದು. ನಾವೂ 'ನ್ಯೂಟ್ರಲಿಸ್ಟ್ಸ' ಎಂದು ಅದಕ್ಕೆ ಆ ಆಸೆ ಮೂಡಿದ್ದಿರಬಹುದು. ಬಾತು ಕೋಳಿಗೂ ಹಾಗೆಯೇ ನಮ್ಮ ಪಂಚವಾರ್ಷಿಕ ಯೋಜನೆಗಳಿಂದಾಗಿ ಆ ಆಸೆಗೆ ಅವಕಾಶವಾಗಿರಬಹುದು. ಆದರೆ ನಾವು ಅವನ್ನು ಲಕ್ಷಿಸಲು ಸಿದ್ಧವಿರಬೇಕಲ್ಲ.

ಬಕಗಳಂತೂ ಚೀಣೀಯರ ರಾಷ್ಟ್ರೀಯ ಪಕ್ಷಿಯಾಗಲು ತಕ್ಕುದಾದ ಹಕ್ಕಿಗಳು. ಬಕಧ್ಯಾನ ಮಾವೋಗೆ ಸ್ಫೂರ್ತಿ ಕೊಡುತ್ತದೆಂಬ ವದಂತಿಯಿದೆ.

ಗಂಡಭೇರುಂಡ ಮೊದಲು ನಮ್ಮ ಅರಸೊತ್ತಿಗೆಯ ಲಾಂಛನವಾಗಿತ್ತು. ಆದರೆ ಅದು ಕೇವಲ ಕಾಲ್ಪನಿಕ ಹಕ್ಕಿಯಂತೆ. ಆದರೆ ಈ ತುರ್ತುಪರಿಸ್ಥಿತಿಯಲ್ಲಿ ಕಾಲ್ಪನಿಕ ವಾದುದನ್ನು ನಂಬುವಂತಿದೆಯೆ?

____ರಣಹದ್ದನ್ನು ಚೀಣೀಯರ ಹಕ್ಕಿಯೆಂದು ಭಾವಿಸಿಯಾಗಿದೆ A I Rನವರು.

ಆದರೆ ಈ ನಡುವೆ ಕವಿಗಳು ಒಂದೇ ಸಮನೆ ಹಾಡಿ ಹೊಗಳಿದ ಕೋಗಿಲೆ ಅದರ 'ಪರಪುಟ್ಟತನ'ದಿಂದ ಉಪೇಕ್ಷೆಗೀಡಾಯಿತೋ ಏನೋ, ಅಲ್ಲದೆ ಈಗ ಕವಿಗಳೂ ಕೂಡ ಅದರ ಕೈಬಿಟ್ಟಿದಾರಲ್ಲ.

ಅದೇನೇ ಇರಲಿ ನವಿಲು ಈಗ ನಮ್ಮ ರಾಷ್ಟ್ರೀಯ ಪಕ್ಷಿ. ಪುಕ್ಕ ತೆರೆದರೆ ಅದರ ಬೆಡಗು ಕೇಳಬೇಕೆ? ಹಾಗೆ ನೋಡಿದರೆ ಎಂತಹ ತುರ್ತು ಪರಿಸ್ಥಿತಿಯಲ್ಲೂ ನಮ್ಮ ಜನಗಳ ಬೆಡಗು ಬಿನ್ನಾಣವೇನು ಕಡಮೆಯಾಗಿದೆಯೇ. ನಾವು ಗನ್ನು ಹಿಡಿಯುವುದರಲ್ಲೂ ಬೆಡಗೇ ಜಾಸ್ತಿ. ಎಂಥಾ ಟ್ರಾಜೆಡಿಗಳಲ್ಲೇ ಆದರೂ ಪ್ರಾಣ ಹೋಗುವಾಗ ಒಂದು ಕಂದ ಪಲುಕಿದರೇ ನಮಗೆ ಸಮಾಧಾನ ತಾನೆ? ಆದ್ದರಿಂದ ರಾಷ್ಟ್ರದ ಆಳಿವು ಉಳಿವಿನ ಪ್ರಶ್ನೆಯೇ ಆದರೂ ಯುದ್ಧಸನ್ನಾಹದಲ್ಲಿ ನಮ್ಮ ಆಟ, ಉತ್ಸವಗಳೇನು ತುಲಾಭಾರಗಳೇನು, ಜಾತ್ರೆಗಳೇನು ..! ಮಜವೇ ಮಜ! ನವಿಲೇ ನಮಗೆ ತಕ್ಕುದಾದ ಹಕ್ಕಿ. ಪುಕ್ಕ ತೆರೆದ ನವಿಲು ನಮ್ಮ ರಾಷ್ಟ್ರೀಯ ಹಕ್ಕಿ.

ಆದರೆ ಆ ಕಡೆ ನೋಡಿ. ಕೆಂಬೂತ ಪುಕ್ಕ ತೆರೆದುಕೊಂಡು ನಾನೇ ನಿಮಗೆ ಸರಿಯಾದ ಹಕ್ಕಿ ಎಂದು ಕುಣಿದದ್ದೇ ಕುಣಿದದ್ದು! ನಮ್ಮ ಕೆಲವು ಸಲ್ಲಕ್ಷಣಗಳನ್ನು ಕಂಡುಕೊಂಡು ಅದಕ್ಕೂ ನಮ್ಮ ರಾಷ್ಟ್ರೀಯ ಪಕ್ಷಿಯಾಗುವ ಹಂಬಲ ಪಾಪ!

—ರಾಮಿ.

ದಾಂಪತ್ಯ ಸುಖ

ಗಂಡ: "ಅನ್ನ ಮಾಡಿದೆ; ಸಾಂಬಾರು ಮಾಡಿರಿ;
ಬೇಕು ಈಗ ಸರ್ವ ಸಹಕಾರ,"

ಹೆಂಡತಿ: "ಅದನ್ನು ಮುಗಿಸಿರಿ; ಸಮಾಜದ ಮೀಟಿಂಗ್
ಇಂದು; ಏಕೆ ಈ ಅಹಂಕಾರ."

* * * *

ಗಂಡ: "ಕಾಮನ ಕಣ್ಣು, ನವಿಲಿನ ಹೆಣ್ಣು....
(ಉದಯ ಕವಿ) ಮಾವಿನ ಹಣ್ಣು; ತನಿವೆಣ್ಣು.

ಹೆಂಡತಿ: "ತಿನ್ನಿ, ಬನ್ನಿ, ಮೊಸರು ಮಸಾಲೆವಡೆ
(ಕಾದಂಬರಿಪ್ರಿಯೆ) ಮುಗಿಸಿದೆ ಆಗಲೆ; "ಎರಡು ಹೆಣ್ಣು ಮೂರು ಜಡೆ.

—"ಅಷ್ಟಾವಕ್ರ".

ಚೌಮಾವೊ ಭಕ್ತರಿಗೆ

ಸ್ವಾತಂತ್ರ್ಯ ಅಂಬೋದು ದೊಡ್ಡದು ಅದ
ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ ||
ಚರಿತ್ರೆಯ ಪಾಠವ ಓದೀ ಓದೀ
ಕೆಂಪು ಚೀಣಕ್ಕೆ ಮರುಳಾಗುವರೆ?
ಚೌಮಾವೋ ಥಳಕಿಗೆ ಬಾಯ್ಬಾಯಿ ಬಿಡುತಲಿ
ನಿಶಿ ಕಂಡ ಬಾವೀಲಿ ದಿವಿ ಬೀಳಬಹುದೇ?

"ಸ್ವಾತಂತ್ರ್ಯ"

ಮಾವೋನ ಮಂದಿಯು ಹಿಂಡಾಗಿ ನುಗ್ಗುವಾಗ
ತಾಳಿ ತಾಳಿ ಎಂದರೆ ತಾಳುವರೆ
ಧಾಳಿ ಬರುವ ಮುನ್ನ ತಲೆಯನುಪಯೋಗಿಸಿರೋ
ಸುಳ್ಳಿನ ಸ್ನೇಹದ ಸುಳಿಗೆ ಸಿಲುಕಲು ಬೇಡಿ

"ಸ್ವಾತಂತ್ರ್ಯ"

ಏನು ಕಾರಣ ಡಿಮಾಕ್ರಸಿಯನು ಮರೆತಿರಿ
ಚಾಮಾವೋಗಳು ನಿಮ್ಮನುಳಿಸುವರೆ
ಇನ್ನಾದರೂ ಗಟ್ಟಿ ಮನಸೀಲಿ ನಡೆಸಿರಿ
ಪ್ರಜೆಗಳ ರಾಜ್ಯದ ಮಾರ್ಗದಲಿ

"ಸ್ವಾತಂತ್ರ್ಯ"

—ರಾವಿ

ಪಕ್ಕದ ಮನೆ ಪಾತಕ್ಕ

ಪೆನ್ಷನ್ ತೆಗೆದುಕೊಳ್ಳಲು ಬ್ಯಾಂಕಿಗೆ ಹೋದಾಗಲೇ ಅಚ್ಚಣ್ಣ ಸಿಕ್ಕಿದ್ದು. ನೋಡಿ ೧೦-೧೨ ವರ್ಷಗಳಾಗಿತ್ತು. "ಏನಚ್ಚಣ್ಣ ಇಲ್ಲಿಗೆ ಬಂದಿದ್ದೀ! ಚೆನ್ನಾಗಿ ಧೀಯಾ" ಎಂದು ಕುಶಲ ಪ್ರಶ್ನೆಗಳನ್ನು ಕೇಳಿದ್ದಾಯಿತು. ಅಲ್ಲಿಯೇ ಪೆನ್ಷನ್ ತೆಗೆದುಕೊಳ್ಳುಕ್ಕೆ ಬಂದಿದ್ದನೆಂದೂ, ಈಗ ಜಯನಗರದಲ್ಲಿರುವ ದೊಡ್ಡಮಗನ ಮನೇಲಿ ಇದ್ದಾನೆಂದೂ ತಿಳಿಯಿತು. ಇಬ್ಬರ ಕೆಲಸವೂ ಮುಗಿದಮೇಲೆ, ಜಯ ನಗರದ ಬಸ್ಸು ಹತ್ತಿದೆವು. ಮೊದಲನೆ ಬ್ಲಾಕಿನಲ್ಲೇ ಅವ ಇಳಿದ. ಅದೇ ನನ್ನ ಮಗನ ಮನೆ ಎಂದು ಮಹಡಿಮನೆಯೊಂದನ್ನು ತೋರಿಸಿದ. ಬಸ್ಸು ಮುಂದಕ್ಕೆ ಹೋಯಿತು. ಆರನೆ ಬ್ಲಾಕಿನಲ್ಲಿ ನಾನಿಳಿದು ಮನೆಗೆ ಹೋದೆ. ಹಳೇ ಸ್ನೇಹಿತ ಸಿಕ್ಕಿದ ನಲ್ಲಾ ಬೇಜಾರಾದಾಗ ಹರಟೆ ಕೊಚ್ಚುಕ್ಕೆ ಅನುಕೂಲವಾಯ್ತು ಎಂದಂದುಕೊಂಡೆ.

ಮೂರನೆ ತಿಂಗಳು ಪೆನ್ಷನ್‌ಗೆ ಹೋದೆ. ಅಚ್ಚಣ್ಣ ಬಂದಿತ್ತಿಲ್ಲ. ಯಾಕೋ ಮೈ ಚೆನ್ನಾಗಿತ್ತಿಲ್ವೇನೋ, ಬರೆದು ಮನೆಗೆ ತರಿಸಿಕೊಂಡಿರಬಹುದು ಎಂದುಕೊಂಡೆ. ಆ ತಿಂಗಳೆಲ್ಲಾ ನಮ್ಮ ಬಡಾವಣೇಲಿ ಪುರಾಣ ನಡೀತಿತ್ತು. ಹಾಗಾಗಿ ಅಚ್ಚಣ್ಣನ್ನ ನೋಡುಕ್ಕೆ ಹೋಗಲಿಲ್ಲ.

ಆದರ ಮುಂದಿನ ತಿಂಗಳು ಕೂಡ ಅಚ್ಚಣ್ಣ ಬ್ಯಾಂಕಿಗೆ ಬಂದಿರಲಿಲ್ಲ ಏನಾಯ್ತೋ ಪಾಪ! ಅಂತ ಅನ್ನಿಸ್ತು. ಒಂದು ಸರ್ತಿ ನೋಡೋಣ ಅನ್ನಿಸ್ತು. ಬಸ್ಸಿನಲ್ಲಿ ಕೂತಾಗ ಜಯನಗರದ ಮೊದಲನೇ ಬ್ಲಾಕಿಗೆ ಟಿಕೇಟ್ ಕೊಂಡೆ. ಅವರ ಮಗನ ಮನೆ ಎದುರಿನಲ್ಲಿ ಇಳಿದೆ. ಒಳಕ್ಕೆ ಹೋದೆ. ಶಾಮೂನೇ ಸಿಕ್ಕ "ಅಪ್ಪ ಎಲ್ಲಿ ಎರಡು ತಿಂಗಳಿಂದ ಬ್ಯಾಂಕಿಗೆ ಬರಲಿಲ್ಲ" ಎಂದೆ.

"ಅದೇನು ಹೇಳಲಿ ಮಾವಯ್ಯ! ನಾಗಮಂಗಲದಲ್ಲಿ ರಿಟೈರಾಗೋವಾಗ ಒಂದು ಮನೆ ಕಟ್ಟಿಸಿದರು ಅಪ್ಪ. ಒಗ್ಗಿದ ಸ್ಥಳ, ಇಲ್ಲೇ ಇರ್ತೀನಿ ಅಂತ ಆಗ ಅಂದಿದ್ದರು. ಬೇಡ ಅಪ್ಪಾ ನಾವೆಲ್ಲಾ ಕೆಟ್ಟು ಪಟ್ಟಣ ಸೇರಿಕೋತೀವಿ ಮುದುಕರು ನೀವು ನೀವು ಇಲ್ಲಿದ್ದರೆ ನಮಗೂ ಕಾಳಜಿ, ನಮ್ಮ ಜತೇಲೇ ಇರಿ ಎಂದು ಕೇಳಿಕೊಂಡೆ. ಉಹೂ ಅಂದರು. ಅಲ್ಲೇ ಆರು ತಿಂಗಳು ಇದ್ದರು. ಬೇಜಾರಾ ಗಿರಬೇಕು, ಅವರಿಗೆ ಮಂಡಿ ನೋವು ಬಂದಾಗ, ಆಗ ನಮ್ಮನೆಗೆ ಬಂದರು. ಅಲ್ಲಿ ಮನೇನ ಬಾಡಿಗೆಗೆ ಕೊಟ್ಟು ಬಂದರು. ಈಗ ತಿಂಗಳು ತಿಂಗಳಿಗೂ ಬಾಡಿಗೆ ವಸೂಲ್ಮಾಡುಕ್ಕೆ ಅಲ್ಲಿಗೆ ಹೋಗ್ತಾರೆ. ಬಾಡಿಗೆದಾರ ಸಬೂಬು ಹೇಳಿ ಹಿಂದಕ್ಕೆ ಬರಿ ಕೈಯಲ್ಲಿ ಕಳಿಸ್ತಾನೆ. ಇಲ್ಲಿಗೆ ಹಿಂತಿರುಗಿದ ಮೇಲೆ "ಹಾಳು ಸೂ....ಹಜಾರದಲ್ಲಿ

ದನ ಕಟ್ಟಿದ್ದಾನೆ. ಹೊರ ಗೋಡೆಮೇಲೆ ಬಿರಣಿ ತಟ್ಟಿದ್ದಾನೆ. ಮನೆ ಹಾಳ್ಮಾಡಿದ್ದಾನೆ. ಬಿಡ್ತು ಅಂದರೆ ಬಾಡಿಗೇನೂ ಸರಿಯಾಗಿ ಕೊಡುಲ್ಲ." ಅಂತೆಲ್ಲಾ ಲೊಟಗುತ್ತಾರೆ.

ಈಗಲೂ ಬಾಡಿಗೆ ವಸೂಲೀಗೆ ಹೋಗಿದ್ದಾರೆ. ನಾಳೆನಾಡಿದ್ದರಲ್ಲಿ ಬರೋರು. ಅಂದ ಶಾಮು.

" ಅಲ್ಲಾ ! ಶಾಮು ! ನಾಗಮಂಗಲದ ಮನೇನ ಹೋದಷ್ಟಕ್ಕೆ ಮಾರಿಬಿಟ್ಟು ಇಲ್ಲಿ ಸುಖವಾಗಿರ್ಬಾರದೇ, ಏಷ್ಟು ನಷ್ಟ ಆದಾತು " ಎಂದೆ.

" ನಷ್ಟ ಆಗುಲ್ಲ ಮಾವಯ್ಯ ! ಒಂದೆರಡು ಮೂರ ಸಾವಿರ ಲಾಭಾನೇ ಸಿಕ್ಕುತ್ತೆ. ಆದರೆ ಮನೇನ ಮಾರುಕ್ಕೆ ಅಮ್ಮ ಒಪ್ಪುಲ್ಲ ?

ಆ ಮನೇಲಿ ಯಾವ ಮಕ್ಕಳನ್ನೂ ಆಕೆ ಹೆತ್ತಿರಲಿಲ್ಲವಲ್ಲ. ಅದು ಆಕೆಯ ತೌರೂರೂ ಅಲ್ಲ. ಮತ್ತೆ ? " ಎಂದೆ.

" ಪಕ್ಕದಮನೆ ಪಾತಕ್ಕನ ಭಯ, ಅಮ್ಮನಿಗೆ. ಆದಕ್ಕೇ " ಅಂದ ಶಾಮು " ಪಕ್ಕದ ಮನೆ ಪಾತಕ್ಕ ! ಆಕೇನು ಕಂಡು ಸವತಿ ಹಾಗೆ ಈಕೆ ಯಾಕೆ ಭಯಪಡ ಬೇಕು ! ಅಚ್ಚಣ್ಣ ಅಂಥೋನಲ್ಲವಲ್ಲ. ಒಂದೂ ತಿಳಿಯಲ್ಲವಲ್ಲೋ ಶಾಮು ಎಂದೆ.

" ಹಾಗಲ್ಲ ಮಾವಯ್ಯ ! ಪಕ್ಕದ ಮನೆ ಪಾತಕ್ಕನಿಗೂ ಅಮ್ಮನಿಗೂ ಆ ಊರಲ್ಲಿ ಒಂದು ತರಹಾ ಪೈಪೋಟಿ. ಪಾತಕ್ಕನ ಗಂಡ ಮನೆ ಕಟ್ಟಿಸಿದ ಅಂತಲೇ ಅಮ್ಮ ಕೂಡ ಅಪ್ಪನ್ನ ಗೋಳಾಡಿಸಿ ಸ್ವಲ್ಪ ದೊಡ್ಡದು ಕಾಣೋ ಹಾಗೆ ಮನೆ ಕಟ್ಟಿ ಸಿದಳು. ಪಾತಕ್ಕನ ಮನೆ ಎದುರಿಗೆ ಎರಡೆಳೆ ರಂಗೋಲಿ ಇಟ್ಟರೆ, ಅಮ್ಮ ಮೂರೆಳೆ ರಂಗೋಲಿ ಹಾಕಿಸ್ತಿದ್ದಳು. ಅವರ ಮನೆ ಮುಂದೆ ಎರಡು ತೆಂಗಿನ ಸಸಿ ನೆಟ್ಟರು. ಅಮ್ಮ ಮೂರು ನಡೆಸಿದಳು. ವರಾಂಡಕ್ಕೆ ಅವರು ಕೆಂಪು ದೀಪ ಹಾಕಿಸಿದರು. ಅಮ್ಮ ಹಸರುದೀಪ ಹಾಕಿಸಿದಳು. ಪಾತಕ್ಕ ನಾಯಿ ಸಾಕಿದಳು. ಅಮ್ಮ ಬೆಂಗಳೂ ರಿನಿಂದ ನಾಯಿ ತರಿಸಿದಳು. ಹೀಗೇ ಆಗ್ತಿತ್ತು. ಎಲ್ಲಾತರಲ್ಲೂ ಅಮ್ಮನದೇ ಮೇಲುಗೈಯಾಗಿತ್ತು. ಈಗ ಮನೆ ಮಾರಿಬಿಟ್ಟರೆ, ಪಕ್ಕದ ಮನೆ ಪಾತಕ್ಕ ಕೇರಿಲೆಲ್ಲಾ " ಅಮ್ಮ ಮನೆ ಮಾರಿಕೊಂಡು ಓಡಿ ಹೋದರು ಅಂತ ಅಂದುಬಿಡ್ತಾರೆ ಅಂತ ಅಮ್ಮನಿಗೆ ಭಯ. ಅದಕ್ಕೇ ಆಕೆ ಒಪ್ಪುಲ್ಲ. "

" ವಿಷಯ ಬಹಳ ಕಠಿಣವಾದ್ದು ಶ್ಯಾಮು ! ಪರಿಹಾರ ಮಾರ್ಗ ಇಲ್ಲವೇ ಇಲ್ಲ ಬಸವನ ಹುಳು ತನ್ನ ಮನೇನ ಬೆನ್ನುಮೇಲೆ ಹೊತ್ತುಕೊಂಡು ಎಲ್ಲೆಲ್ಲೂ ಹೋಗೋ ಹಾಗೆ, ನಿಮ್ಮಮ್ಮ ಕೂಡ ಆ ನಾಗಮಂಗಲದ ಮನೇನ ಮನಸ್ಸಿನ ಮೇಲೆ ಹೊತ್ಕೊಂಡೇ ತಿರುಗಾಡ್ತಾ ಇದ್ದಾರೆ. ಪಕ್ಕದ ಮನೆ ಪಾತಕ್ಕ ಬಹಳ ಕ್ರೂರಿ ಕಣಪ್ಪಾ ! ಅದಕ್ಕೆ ಮಡಿಯಾಗಿ ನಡೆದುಕೊಳ್ಳಲೇಬೇಕು " ಎಂದೆ.

ಅಪ್ಪಾ ಊರಿಗೆ ಬಂದಾಗ, ನಾನು ಬಂದಿದ್ದೆ ಅಂತ ಹೇಳಪ್ಪಾ, ಎಂದು ಹೇಳಿ ಆರನೇ ಬ್ಲಾಕಿನ ತನಕ ನಡೆದು ಹೋದೆ. ದಾರೀಲಿ ಅಲ್ಲಲ್ಲೇ ಪಕ್ಕದ ಮನೆ ಪಾತಕ್ಕನ ಪ್ರೇತವೇ ಕಾಣಿಸಿದ ಹಾಗೆ ಆಗ್ತಿತ್ತು !

—ಕುಮಾರ್

ಜಗನ್ನಾಥನ ನಾಟಕ

ಒಂದೊಂದು ಬಾರಿ ನನಗನ್ನಿಸುತ್ತೆ ಜನರು ಶಿಲಾಯುಗದಲ್ಲಿ ಸುಖವಾಗಿದ್ದರು ಅಂತ. ಏಕೆಂದರೆ, ಆಗ ಯಾರೂ, ಯಾರಿಗೂ, ಮತ್ಯಾರಿಗೂ ಪರಿಚಯ ಪತ್ರ ಕೊಡುವ ಹಾಗಿರಲಿಲ್ಲ. ಹಾಗೇನಾದರೂ ಕೊಡಬೇಕಾಗಿದ್ದರೆ, ಪತ್ರವನ್ನು ಕಲ್ಲಿನ ಮೇಲೆ ಕೆತ್ತಲು ಒಂದು ವರ್ಷ ಹಿಡಿಯುತ್ತಿತ್ತು. ಮತ್ತು ಅದನ್ನು ಪಡೆದ ಪುಣ್ಯಾತ್ಮ, ಕೇವಲ ಇಪ್ಪತ್ತು ಮೀಟರ್ ದೂರ ಹೊತ್ತು, ಒಂದು ಬದಿಗೆ ಉರುಳಿಸಿ ಕೈ ಕೊಡವಿಕೊಂಡು ಹೊರಟುಹೋಗುತ್ತಿದ್ದ !

ನಾನು ಮದರಾಸಿನಲ್ಲಿದ್ದಾಗ ನಡೆದ ವಿಷಯ ಇದು. "ಬೀಡಿ-ಓರ್-ಕಾಡಿ" ಕುದುರೆ ಗವರ್ನರ್ ಕಪ್ ಗೆದ್ದ ವರ್ಷ. ಶೌರಿ, ನನ್ನ ಮುಂಜಾನೆಯ ಕಾಫಿ ಕೊಡುತ್ತಾ ಹೇಳಿದ—

"ಮೈಸೂರಿಂದ ಜಗನ್ನಾಥರಾವ್ ಬಂದಿದ್ದಾರೆ ಸರ್"-ಅಂತ.

"ಯಾರು ಶೌರಿ ಜಗನ್ನಾಥರಾವ್ ?"

"ರಾಮಪುರದಿಂದ ಕಾಗದ ತಂದಿದ್ದಾರೆ ಸರ್. ನೀವು ಇನ್ನೂ ಎದ್ದಿಲ್ಲವೆಂದು ಕೇಳಿ, ಪುನಃ ಬರುತ್ತೇನೆ ಅಂತ ಹೇಳಿ ಹೋಗಿದ್ದಾರೆ."

ಅದಕ್ಕೇ ನಾನು ಹೇಳಿದ್ದು, ಶಿಲಾಯುಗದಲ್ಲಿ ಜನರು ನೆಮ್ಮದಿಯಿಂದಿರುತ್ತಿದ್ದರು ಅಂತ. ರಾಮಪುರದಿಂದ ಕಾಗದ ಅಂದರೆ-ನಾಗತ್ತೆ ಇಂದಿರಬೇಕು. ಇನ್ನು ಜಗನ್ನಾಥರಾಯ ಅವನೆಂತಹ ಭೂತವೋ, ಪ್ರೇತವೋ ಯಾರು ಬಲ್ಲರು ? ಇನ್ನು ಅವನ ಜವಾಬ್ದಾರಿಯನ್ನು ನಾನು ವಹಿಸಿಕೊಳ್ಳಬೇಕೆಂದು ಆ ಪತ್ರದಲ್ಲಿ ಬರೆದಿದ್ದರೆ ಆಗ ನನ್ನ ಅವಸ್ಥೆ ಕೇಳುವವರ್ಯಾರು ?

ಸ್ನಾನ ಮುಗಿಸಿ, ಬೆಳಗ್ಗಿನ ಫಲಹಾರಕ್ಕೆ ಕುಳಿತಾಗ, ಪೊಯ್ಯಿತಂಬಿ ಬಂದ. ಪೊಯ್ಯಿತಂಬಿ ನನ್ನ ಮದ್ರಾಸಿನ ಗೆಳೆಯ. ನಾನು ಮದ್ರಾಸಿಗೆ ಬಂದಾಗಲೆಲ್ಲಾ, ಟ್ರಿಪ್ಲಿಕೇನಿನಲ್ಲಿ ನನಗಾಗಿ ಒಂದು ಸಣ್ಣಮನೆ ಅಣಿ ಮಾಡಿಟ್ಟಿರುತ್ತಾನೆ. ತಮಿಳನಾದರೂ, ಕನ್ನಡಪ್ರೇಮಿ. ಮದ್ರಾಸಿನ 'ಆರ್ಯದ್ರಾವಿಡ ಸರ್ವಭಾಷಾ ಕಲಾ ಕೋವಿದ ಸಂಘದ' [ಆ. ದ್ರಾ. ಸ. ಭಾ. ಕ. ಕೋ ಸಂಘ] ಕಾರ್ಯದರ್ಶಿ. ಹಾಗೂ ಜೂಜಿನ ಕುದುರೆಗಳ ಬಗ್ಗೆ ಸೂಕ್ಷ್ಮ ಜ್ಞಾನ ಉಳ್ಳವ.

ಶೌರಿ, ನಮ್ಮಿಬ್ಬರಿಗೂ ಪಲಹಾರ ತಂದ. ಇಡ್ಲಿ ತಿಂದು ಉದ್ದಿನೊಡೆಗೆ ಕೈ ಹಾಕಿದ್ದೆ-ಬಾಗಿಲು ತಟ್ಟಿದ ಶಬ್ದವಾಯ್ತು, ಶೌರಿ ಬಾಗಿಲು ತೆರೆದ.

" ಜಗನ್ನಾಥರಾಯರು ಸರ್ " ಅಂದ.

ನನಗೂ, ಪೊಯ್ಯಿತಂಬಿಗೂ, ಜಗನ್ನಾಥರಾಯನಿಗೂ, ಶೌರಿಯೇ ಪರಸ್ಪರ ಪರಿಚಯ ಮಾಡಿಸಿದ ಎಲ್ಲರೂ ಸಮಾಧಾನದಿಂದ ಕಾಫಿ ಕುಡಿದೆವು.

ಜಗನ್ನಾಥ, ತಾನು ತಂದಿದ್ದ ಕಾಗದ ಕೊಟ್ಟ. ಓದಿದೆ,

ಜಗನ್ನಾಥ, ಕೊಪ್ಪಲಹಳ್ಳಿ ತ್ರಿವಿಕ್ರಮರಾಯರ ಮಗ. ಕೊಪ್ಪಲಹಳ್ಳಿ ನಾಗತ್ತೆಯ ತವರೂರು. ಹಾಗೂ, ಜಗನ್ನಾಥನ ತಾಯಿ ಜಲಜಾಕ್ಷಮ್ಮ, ನಾಗತ್ತೆಯ ಸಹಪಾಠಿಯಂತೆ. ಇದೇ ಹಕ್ಕಿನ ಮೇಲೆ ನಾಗತ್ತೆ, ಜಗನ್ನಾಥನಿಗೆ ಪರಿಚಯ ಪತ್ರ ಕೊಟ್ಟು ನನ್ನ ಹತ್ತಿರ ಅಟ್ಟಿದರು. ಅವನು ಮದ್ರಾಸಿನಲ್ಲಿ ' ಲಾ ' ಓದಲಿಕ್ಕಾಗಿ ಬಂದವನೆಂದೂ, ಅವನನ್ನು ಲಾಕಾಲೇಜು ಸೇರಿಸಿ, ಒಳ್ಳೆಯ ಸಂಗದಲ್ಲಿ ಬಿಟ್ಟು, ಬರುವುದು ನನ್ನ ಜವಾಬ್ದಾರಿ ಎಂದು ತಿಳಿಸಿದ್ದರು.

ನಾನು, ನಾಗತ್ತೆಯ ಕಾಗದ ಓದುತ್ತಿದ್ದಾಗ, ಜಗನ್ನಾಥ, ಪೊಯ್ಯಿತಂಬಿ, ಬಹಳ ಅನ್ಯೋನ್ಯವಾಗಿ ಮಾತುಕತೆ ಆರಂಭಿಸಿದ್ದರು. ಪ್ರಾಯಶಃ ಪೊಯ್ಯಿತಂಬಿಗೆ, ನನಗಿಂತಲೂ ಜಗನ್ನಾಥ ಒಳ್ಳೆಯ ಆಸಾಮಿ ಎನಿಸಿರಬೇಕು. ಮಾತು ಮುಗಿಸಿ ಇಬ್ಬರೂ ಎದ್ದರು.

" ಪಾಂಡುರಂಗರಾವ್ ನಾನು ಪುನಃ ನಿಮ್ಮನ್ನು, ರಾತ್ರಿ ಭೇಟಿ ಮಾಡ್ತೀನಿ. ನಾನು ಎವೆರೆಸ್ಟಿನಲ್ಲೇ ಇಳಿದುಕೊಂಡಿದ್ದೀನಿ " ಅಂದ ಜಗನ್ನಾಥ.

" ಈಗ ...ಎಲ್ಲಿಗೆ ? " ಅಂದೆ.

" ಪೊಯ್ಯಿತಂಬಿಯವರ ಜೊತೆಯಲ್ಲಿ ಹಾಗೇ ಸುತ್ತಾಡಿಕೊಂಡು ಬರ್ತೀನಿ "

" ಹೌದು ಪಾಂಡುರಂಗರಾವ್ ಜಗನ್ನಾಥರಾಯರನ್ನ, ನಮ್ಮ ಸಂಘಕ್ಕೂ ಕರ್ಕೊಂಡು ಹೋಗ್ತೀನಿ. ಸಂಜೆ ನಾನೂ ಬರ್ತೀನಿ " ಅಂದ ಪೊಯ್ಯಿತಂಬಿ.

ಇಬ್ಬರೂ ಹೊರಟರು.

ಮಧ್ಯಾಹ್ನ ಪೋಸ್ಟಿನಲ್ಲಿ, ಮತ್ತೊಂದು ಕಾಗದ, ರಾಮಪುರದಿಂದ ಬಂತು.

'....ಜಗನ್ನಾಥ ಬಂದು ಸೇರಿರಬಹುದು. ಏನೇ ಆದರೂ, ಆ ಹುಡುಗನನ್ನು, ನಾಟಕ ಅಥವಾ ಸಿನಿಮಾ ಜನರ ಜೊತೆಯಲ್ಲಿ ಭೇಟಿ ಮಾಡಿಸಬೇಡ. ಅದರಿಂದ ಏನಾದರೂ ಅನರ್ಥವಾದರೆ ಅದಕ್ಕೆಲ್ಲಾ ನೀನೇ ಜವಾಬ್ದಾರಿ ಹೊರಬೇಕಾಗುತ್ತೆ. ಹುಷಾರಾಗಿರು....ನಾಗಮ್ಮ' ಅಂತ ಬರೆದಿತ್ತು.

" ಶೌರೀ " ಅಂದೆ.

" ಸರ್ " ಅಂದ.

" ರಾಮಪುರದಿಂದ ಕಾಗದ ಬಂದಿದೆ. ಏನು ಗೊತ್ತೇ ? "

" ಇಲ್ಲ ಸರ್ "

" ಇಗೋ ಓದು "

ಓದಿದ.

"ಬಹಳ ವಿಚಿತ್ರ ಸರ್" ಅಂದ.

"ಬಹಳ ವಿಚಿತ್ರ? ಆ ಜಗನ್ನಾಥ ಇಲ್ಲಿಗೆ ಬಂದವನೇ, ನೇರವಾಗಿ ಪೊಯ್ಯಿ ತಂಬಿಯ ಮಡಿಲಲ್ಲೇ ಬಿದ್ದಿದ್ದಾನೆ ಇದರ ಪರಿಣಾಮ ನೀನೇ ಯೋಚಿಸು!"

"ಈಗಲೇ ಏನು ಹೇಳೋದು ಸರ್. ಕಾದು ನೋಡಬೇಕು ಅಷ್ಟೆ." ಅಂದ.

ಪುಣ್ಯವಂತ ಶೌರಿ. ಹಿಂದಿನ ಜನ್ಮದಲ್ಲಿ ಕಲ್ಲು ಬಂಡೆಯಾಗಿದ್ದನೋ ಏನೋ!

ರಾತ್ರಿ ಊಟ ಮುಗಿಸಿ, ಬೀಡದಿಂದ ಲವಂಗ ಈಚೆಗೆ ಎಳೆಯುತ್ತಿದ್ದಾಗ, ಜಗನ್ನಾಥ ಪೊಯ್ಯಿತಂಬಿ ಇಬ್ಬರೂ ಬಂದರು.

"ಪಾಂಡುರಂಗರಾವ್ ನಾನು ಮದ್ರಾಸಿಗೆ ಬಂದ ಘಳಿಗೆ ಬಹಳ ಒಳ್ಳೆಯದಿರಬೇಕು. ಅದರಲ್ಲೂ ನಿಮ್ಮ ಮನೆಯಲ್ಲಿ ಈ ಪೊಯ್ಯಿತಂಬಿಯವರ ಭೇಟಿಯಾಗಿದ್ದು ನನ್ನ ಪುಣ್ಯ" ಅಂದ ಜಗನ್ನಾಥ.

ಅವನು, ಪೊಯ್ಯಿತಂಬಿ ಇಬ್ಬರೂ ಸೋಫಾ ಮೇಲೆ ಕುಳಿತರು.

"ಪಾಂಡುರಂಗರಾವ್, ನಿಮ್ಮ ಸ್ನೇಹಿತರು ಜಗನ್ನಾಥರಾಯರಿಗೆ ನಾಟಕ ಅಂದರೆ ಬಹಳ ಹುಚ್ಚು, ಅದಕ್ಕೆ ನಮ್ಮ ಸಂಘದ, ಮುಂದಿನ ಕನ್ನಡ ನಾಟಕದಲ್ಲಿ ಅವರಿಗೆ ಒಂದು ಪಾತ್ರ ಕೊಟ್ಟಿದೇನೆ." ಅಂದ ಪೊಯ್ಯಿತಂಬಿ.

"ಕಿತ್ತಲೇಹಣ್ಣಿನ ರಸ ಸರ್" ಅನ್ನುತ್ತಾ ಶೌರಿ ಮೂರು ಲೋಟಾಗಳಲ್ಲಿ ಷರಬತ್ ತಂದಿಟ್ಟ.

"ನನ್ನ ತಂದೆ ತಾಯಿ ನಾನು ಮುಂದೆ ಲಾಯರಾಗಿ, ಮೆಂಬರ್ ಆಗಿ, ಭಾರತದ ಪ್ರಧಾನಮಂತ್ರಿ ಪಟ್ಟದವರಿವಿಗೂ ಹೋಗಬೇಕೆಂದು ಆಸೆ ಪಡುತ್ತಿದ್ದಾರೆ. ಆದರೆ ನನಗೆ ಓದೋದೂಂದ್ರೆ ತಲೆಶೂಲೆ. ಬಿ.ಎ. ಮುಗಿಸೋಹೊತ್ತಿಗೆ ಅರ್ಧ ಹುಚ್ಚಾಗಿದ್ದೇನೆ. ಈಗ ನನಗೆ ಪೊಯ್ಯಿತಂಬಿಯಿಂದ ಸಿಕ್ಕಿರೋ ಅವಕಾಶ ಫಲಿಸಬಿಟ್ಟರೆ ಮುಂದೆ ನಾನು ಸಿನಿಮಾ ನಟನಾಗಿ, ಪ್ರಧಾನಮಂತ್ರಿಯ ನಾಲ್ಕರಷ್ಟು ಹಣ ಸಂಪಾದಿಸ್ತೇನೆ" ಅಂದ ಜಗನ್ನಾಥ.

ಇಬ್ಬರೂ ಸ್ವಲ್ಪ ಹೊತ್ತು ಅದೂ ಇದೂ ಮಾತನಾಡಿ ಹೊರಟುಹೋದರು.

ಮಾರನೆಯ ದಿನ ರಾತ್ರಿ ಜಗನ್ನಾಥ, ನಾಟಕದಲ್ಲಿ ತನ್ನ ಪಾತ್ರದ ಪರಿಚಯ ಮಾಡಿದ. ತನ್ನ ಕಿಸೆಯಿಂದ 3-4 ಹಾಳೆ ತೆರೆದು ತೋರಿಸಿದ.

"ಇದೇ "ಊಹಾಪೋಹ" ನಾಟಕದಲ್ಲಿ ನನ್ನ ಪಾತ್ರದ ಸಂಭಾಷಣೆ" ಅಂದ.

ಸಮಾಚಾರ ವಿ ಪ ರೀ ತ ಕ್ಕೆ ಟ್ಟು ಕೊ ಳ್ಳು ತ್ತ ದೆಂ ದು ಮಂದಟ್ಟಾಯ್ತು. ಲಾಕಾಲೇಜಿಗೆ ಸೇರಲು ಇನ್ನೇನು ಕೇವಲ ಎರಡು ವಾರಗಳ ಅವಧಿ ಇದ್ದಿರಬಹುದು.

"ಶೌರೀ" ಅಂದೆ ಜಗನ್ನಾಥ ಎವರಸ್ಟ್ ತಟ್ಟಿದಾಗ.

"ಸರ್"

" ಸಮಾಚಾರ ವಿಪರೀತವಾಗುತ್ತಿದೆ ಶೌರಿ. ಇದರ ಪರಿಣಾಮ ಏನೂಂತ ಯೋಚಿಸಿದ್ದೀಯ ? "

" ನಾಗಮ್ಮನವರು ನಿಮ್ಮ ಮೇಲೆ ಅಸಮಾಧಾನ ಪಟ್ಟುಕೊಳ್ಳಬಹುದು ಸರ್ " ಅಂದ.

ನನಗನ್ನಿಸುತ್ತೆ ಒಂದು ವೇಳೆ ನಾನೇನಾದರೂ, ಭೀಮಸಾವನ ಕೊಲೆ ಪ್ರಯತ್ನ ನಡೆಸಿದ್ದರೂ ಕೂಡ ಶೌರಿ ಇದೇ ರೀತಿ ಹೇಳುತ್ತಿದ್ದ ಅಂತ! ಏಕೆಂದರೆ ಶೌರಿಯ ಶಬ್ದಕೋಶದಲ್ಲಿ ಉತ್ಪ್ರೇಕ್ಷೆ, ಗಾಬರಿ ಎನ್ನುವ ಪದಗಳೇ ಇಲ್ಲ. ಈಗ ನಮ್ಮ ದೇಶದಲ್ಲಿ ಒದಗಿರುವ ಪರಿಸ್ಥಿತಿಯಲ್ಲಿ ನಮ್ಮ ಪ್ರಧಾನಿ ನೆಹರು, ಚೌ ಇನ್‌ಲೇ ಬಗ್ಗೆ ಏನು ತಿಳಿದುಕೊಂಡಿದ್ದಾರೆ ಅಂತ ಶೌರಿಯನ್ನು ಯಾರಾದರೂ ಕೇಳಿದರೆ ನೆಹರು ಚೌ-ಇನ್-ಲೇ ಬಗ್ಗೆ ಸ್ವಲ್ಪ ಅಸಮಾಧಾನಪಟ್ಟಿದ್ದಾರೆ ಅನ್ನಬಹುದು! ಆದರೆ ನಿಜವಾಗಿ ಹೇಳೋದಾದರೆ, ಜಗನ್ನಾಥನೇನಾದರೂ ನಾಟಕರಂಗಕ್ಕೆ ಪ್ರವೇಶ ಮಾಡಿದ್ದಾನೆ ಅಂತ ನಾಗತ್ತೆಯ ಕಿವಿಗೆ ಬಿತ್ತು ಅಂದರೆ, ಆಕೆ ಬರೀ ಅಸಮಾಧಾನ ಪಟ್ಟುಕೊಳ್ಳುವುದಿರಲಿ ನಾನು ಇನ್ನುಮುಂದೆ ರಾಮಪುರದಿಂದ ನೂರುಮೈಲಿ ಸರಹದ್ದಿನ ಒಳಗೆ ಪ್ರವೇಶ ಮಾಡದ ಹಾಗೆ ದಿಗ್ಬಂಧನ ಮಾಡಿಸಿಬಿಡುತ್ತಾರೆ!

" ಶೌರೀ ಜಗನ್ನಾಥನ್ನ ಈ ನಾಟಕದ ಹುಚ್ಚಿಂದ ಬಿಡಿಸೋಕೆ ಏನಾದರೂ ಉಪಾಯ ಮಾಡಬೇಕು ಯೋಚನೆ ಮಾಡು ಶೌರಿ " ಅಂದೆ.

" ಪ್ರಯತ್ನಪಡ್ತೀನೆ ಸರ್ " ಅಂದ.

ಮಾರನೆಯ ದಿನ ರಾತ್ರಿ ಜಿ.ಎನ್.ಬಿ. ಸಂಗೀತಕಚೇರಿ ಮುಗಿಸಿ ಮನೆ ಸೇರಿದೆ. ಮನೆಯ ಹಾಲಿನಲ್ಲಿ ಒಂದು ಸಣ್ಣ ಸತ್ಕಾರ ಕೂಟವಿದ್ದಹಾಗಿತ್ತು.

" ಕ್ಷಮಿಸಿ ಸರ್, " ಅಂದ ಶೌರಿ.

" ಪರವಾಗಿಲ್ಲ ಶೌರಿ, ತೊಂದರೆ ಇಲ್ಲ. ಆದರೆ ಈ ಮದ್ರಾಸಿನಲ್ಲಿ ನಿನಗೆ ನೆಂಟರಿದ್ದಾರೆ ಅಂತ ನನಗೆ ಗೊತ್ತಿರಲಿಲ್ಲ. " ಅಂದೆ.

ಕೂಟದಲ್ಲಿ ಶೌರಿಯಲ್ಲದೆ ಒಬ್ಬ ಧಡೂತಿ 30—35 ವರ್ಷದ ಆಸಾಮಿ, ಮತ್ತು ಸುಮಾರು 12-13 ವರ್ಷದ ಹುಡುಗ ಇದ್ದರು. ಧಡೂತಿ ಆಸಾಮಿ ಪ್ಯಾಂಟು ಬುಷ್ ಕೋಟ್ ಧರಿಸಿದ್ದ. ಹುಡುಗ ಕರಿಯ ನಿಕ್ಕರ್, ಆವಾಕ ಬುಷ್ ಷರ್ಟ್, ಹವಾಯಿ ಚಪ್ಪಲ್ ಧರಿಸಿದ್ದ. ನೋಡಿದೊಡನೆ ತನ್ನ ಕ್ಲಾಸಿನಲ್ಲಿ ಸಂಸ್ಕೃತ ಉಪಾಧ್ಯಾಯರ ಪಂಚೆಯ ಕಚ್ಚೆಗೆ ಯಾರಾದರೂ, ಹತ್ತಿಸಿದ ಪಟಾಕಿಸರ ಕಟ್ಟಿದರೆ ಅದು ಈ ಹುಡುಗನೇ ! ಅಂತ ಹೇಳಬಹುದಿತ್ತು.

" ಓಹೋ ! ಅಂದ ಹುಡುಗ, ನನ್ನ ನೋಡಿದೊಡನೆಯೇ. "

" ಇವರೇ ನನ್ನ ಬಾಸ್ (Boss) " ಅಂದ ಶೌರಿ.

" ನೀವೇನೋ ಪಾಂಡುರಂಗರಾವ್ ? " ಅಂದ ಹುಡುಗ.

" ಹೌದು " ಅಂದೆ

" ಶೌರಿ—ನೀ ಹೇಳಲೇ ಇಲ್ಲ ನಿನ್ನ ಬಾಸ್‌ಗೆ ಮಾನಿನ ಮುಖ ಅಂತ " ಅನ್ನುತ್ತಾ ಹುಡುಗ ಶೌರಿಯನ್ನು ಕೇಳಿದ, ನನ್ನ ಮುಖ ನೋಡುತ್ತಾ.

ನನಗೆ ಕಿಡಿ ಕಿಡಿಯಾಯ್ತು. ಆ ಹುಡುಗನಿಗೆ ಫಳೀರ್ ಅಂತ ಕೆನ್ನೆಗೆ ಎರಡು ಬಿಡಲೇ ಅನ್ನಿಸಿತು. ಕೈಕೂಡ ಸರಿಪಡಿಸಿಕೊಂಡೆ. ಆ ಹುಡುಗ ನನ್ನ ಮನೆಯ ಅತಿಥಿ ಅನ್ನುವುದನ್ನು ಕೂಡ ತಳ್ಳಿಹಾಕಲು ಸಿದ್ಧನಾದೆ.

" ಶೌರೀ ! " ಅಂತ ಕೂಡ ಅಂದೆ.

ಜಗನ್ನಾಥರಾಯರು ಬಂದರು ಸರ್ " ಅಂದ ಶೌರಿ.

ಜಗನ್ನಾಥ ಬಂದ.

ಹುಡುಗ ಜಗನ್ನಾಥನ ಕಡೆ ತಿರುಗಿದ.

" ಓಹೋ ! ಓಹೋ !! ಇಲ್ಲಿ ಜೂನೇ ಸೇರಿದಹಾಗಿದೆ. ಇದ್ಯಾರಪ್ಪ ಕಪ್ಪೆ ಮೂತಿಯವರು ಶೌರಿ ?!!

ಜಗನ್ನಾಥ ಒಂದೇ ಬಾರಿಗೆ ಹಾರಿದ.

"ಯಾರ‍್ರೀ ಪಾಂಡುರಂಗರಾವ್ ಈ-ಈ ಮಂಗ?" ಅನ್ನುತ್ತಾ ಜಗನ್ನಾಥ ಶಾಂತವಾಗಿಯೇ ವಿಚಾರಿಸಿದ.

" ಏನು ? ನಾನು ಮಂಗ ! ಅಹಹಾ ! ಕಪ್ಪೆಮೂತಿ ಇಟ್ಟುಕೊಂಡು ನನ್ನ ಮಂಗ ಅಂತೀಯಾ ? ನಿನ್ನ ಸರ್ಕಸ್‌ನಲ್ಲಿ...." ಹುಡುಗ ಶುರು ಮಾಡಿದ.

ಜಗನ್ನಾಥ ಹುಡುಗನಿಗೆ ಪೂರ್ತಿ ಹೇಳಲು ಬಿಡಲಿಲ್ಲ. ನನಗೇನೋ ಕೇಳ ಬೇಕೆಂಬ ಕುತೂಹಲವಿತ್ತು. ಏಕೆಂದರೆ ಹುಡುಗನ ಮಾತಿನಲ್ಲಿ ತುಂಬಾ ಹುರುಪಿತ್ತು. ಆದರೆ ಅಷ್ಟರಲ್ಲಿ ಜಗನ್ನಾಥ ಅವನ ಕೆನ್ನೆಗೆ ಫಳೀರ್ ಅಂತ ಬಿಟ್ಟಿದ್ದ. ಹುಡುಗ ಸೂರು ಕಿತ್ತುಹೋಗುವ ಹಾಗೆ ಕಿರುಚಕ್ಕೆ ಶುರು ಮಾಡಿದ.

" ಶೌರೀ. " ಅಂದೆ

" ಆಗಲಿ ಸರ್." ಅಂದ.

ಮರುಕ್ಷಣ ತನ್ನ ಅತಿಥಿಗಳನ್ನು ಹೊರಕ್ಕೆ ಬಿಟ್ಟುಬಂದ.

ಇದಾದಮೇಲೆ ಕೆಲವು ದಿನಗಳವರಿವಿಗೆ ನನಗೆ ನರಕವಾಸವಾಯ್ತು. ಜಗನ್ನಾಥ ಬಂದಾಗಲೆಲ್ಲಾ ' ಊಹಾಪೋಹ 'ದಲ್ಲಿ ತನ್ನ ಪಾತ್ರ, ಸಂಭಾಷಣೆ, ಅಭಿನಯ ಪ್ರದರ್ಶಿಸಹತ್ತಿದ. ಪ್ರತಿನಿತ್ಯ ತನ್ನ ಪಾತ್ರದಲ್ಲಿ ಒಂದು ನ್ಯೂನತೆ ತೋರಿಸುತ್ತಿದ್ದ.

ಸತ್ಯವಾಗಿ ಹೇಳೋದಾದ್ರೆ ಗಂಗಾಪ್ರಸಾದ್ ಕವ್ ರೇಸಿನಲ್ಲಿ ಭೇಟೂ-ಕ-ಭೇಟಿ ಕುದುರೆ ಓಡುತ್ತೆ ಅಂತ ನನಗೆ ತಿಳಿಯದೇ ಇದ್ದಿದ್ದರೆ–ಮದ್ರಾಸ್ ಎಂದೋ ಬಿಟ್ಟು

ಬಿಡುತ್ತಿದ್ದೆ. ಪೊಯ್ಯಿತಂಬಿ ಭೇಟಾ-ಕ-ಭೇಟಿ ಬಗ್ಗೆ ಬಹಳ ಭರವಸೆ ಹೇಳಿದ್ದ ಆದ್ದರಿಂದ ಜಗನ್ನಾಥನ ಸಂಕಟ ಅನುಭವಿಸಲೇಬೇಕಾಯ್ತು. ಶೌರಿಯಂತೂ ಸುಮ್ಮನಿದ್ದ.

"ಸಮಯ ಬರುತ್ತೆ ಸರ್. ನಾನು ಸರಿಪಡಿಸ್ತೇನೆ" ಅನ್ನುತ್ತಿದ್ದ.

ಒಂದು ವಾರ ಕಳೆದಮೇಲೆ ಒಂದು ಮಧ್ಯಾಹ್ನ, ಊಟ ಮುಗಿಸಿ ಸೋಫಾ ಮೇಲೆ ಮಲಗಿದ್ದೆ. ಜಗನ್ನಾಥ್ ಬಂದ.

"ಪಾಂಡುರಂಗರಾವ್—ಈ ಸಂಜೆ ಏನ್ಮಾಡ್ತೀರಿ?" ಅಂದ.

"ಶೌರೀ—ಈ ಸಂಜೆ ಏನಿದೆ?" ಅಂದೆ.

"ಮೈಲಾಪುರಂನಲ್ಲಿ ದ್ವಾರಂ ಪಿಟೀಲ್ ಸರ್" ಅಂದ.

"ಪಾಂಡುರಂಗರಾವ್—ಇವತ್ತು ಎಗ್ಮೋರ್‌ನಲ್ಲಿ ನಮ್ಮ ಸಂಘಕ್ಕೆ ಬನ್ನಿ. ಸಂಜೆ ನಮ್ಮ ನಾಟಕದ ಡ್ರೆಸ್ ರಿಹರ್ಸಲ್ ನೋಡಲೇಬೇಕು ನೀವು. ಪೊಯ್ಯಿತಂಬಿ ಅಲ್ಲೇ ಇರ್ತಾರೆ. ಅವರೂ ಹೇಳಿದ್ದಾರೆ. ಅಂದ ಜಗನ್ನಾಥ.

ಅಂದು ದ್ವಾರಂ ಕಚೇರಿಗೆ ತಪ್ಪಿಸಿಕೊಳ್ಳಲು ನನಗೆ ಸುತರಾಂ ಇಷ್ಟವಿರಲಿಲ್ಲ. ಅದಕ್ಕಾಗಿ ನನ್ನ ಸಿಲ್ಕ್ ಜುಬ್ಬಾನ ಕೂಡ ಕಾದಿರಿಸಿಟ್ಟಿದ್ದೆ.

"ಹೌದು ಸರ್ ನೀವು ಇವತ್ತು ಜಗನ್ನಾಥರಾಯರ ನಾಟಕದ ರಿಹರ್ಸಲ್ ನೋಡಿ ಸರ್. ಮುಂದಿನ ಭಾನುವಾರ ಗೋಖಲೇ ಹಾಲಿನಲ್ಲಿ ಪುನಃ ದ್ವಾರಂ ಪಿಟೀಲು ಕೇಳಬಹುದು" ಅಂದ ಶೌರಿ.

ಸರಿ ಅಂದುಕೊಂಡು ಅಂದು ಸಂಜೆ ಆ. ದ್ರಾ, ಸ. ಭಾ. ಕ. ಕೋ. ಸಂಘಕ್ಕೆ ಹೊರಟೆ. ಪೊಯ್ಯಿತಂಬಿ ನನ್ನನ್ನು ನೋಡಿ ಸಂಘದ ಹಾಲಿನೊಳಗೆ ಸೇರಿಸಿದ. ರಿಹರ್ಸಲ್ ಶುರು ಆಗುವುದಕ್ಕೆ ಎಲ್ಲಾ ಅಣಿಯಾಗಿತ್ತು. ಸ್ಟೇಜಿನಿಂದ ನಾನು ಕುಳಿತಿದ್ದ ಕುರ್ಚಿಗೆ ಸುಮಾರು ನಾಲ್ಕು ಕುದುರೆಗಳ ಉದ್ದದಷ್ಟು ದೂರವಿರಬಹುದು ಸ್ಟೇಜಿಗೆ ಹೊರತು, ಮಿಕ್ಕೆಲ್ಲ ಕಡೆ ದೀಪ ಆರಿಸಿದ್ದರು. ಹಾಗಾಗಿ ನನ್ನ ಅಕ್ಕಪಕ್ಕದಲ್ಲಿ ಅಥವಾ ಎದುರು ಹಿಂದುಗಡೆಗಳಲ್ಲಿ, ಮತ್ಯಾರು ಕುಳಿತಿದ್ದರು ಅಂತ ನನಗೆ ತಿಳಿಯಲಿಲ್ಲ.

ಪ್ರಾರ್ಥನೆ ಮುಗಿಯಿತು. ದೊಡ್ಡ ಪರದೆ ಎತ್ತಿದರು. ರಸ್ತೆಯ ಸೀನಿನಲ್ಲಿ ರಾಧಾ ಕೃಷ್ಣ ಡ್ಯಾನ್ಸ್ ಆಯಿತು. ಅದಾದಮೇಲೆ ಅಧ್ವಾನವನದ ಸೀನಿನಲ್ಲಿ, "ಊಹಾಪೋಹ" ಶುರುವಾಯ್ತು. ಒಂದು ಹೆಣ್ಣು ಒಂದು ಗಂಡು, ಇವರಿಬ್ಬರ ಹಿಂದೆ ಮತ್ತೊಂದು ಗಂಡು ನಿಂತಿದ್ದರು. ಮುಂದಿದ್ದ ಹೆಣ್ಣು, ಗಂಡು, ಸಾಧಾರಣ ಈಗಿನ ಕಾಲದ ಪೋಷಾಕಿನಲ್ಲಿದ್ದರು. ಹಿಂದೆ ನಿಂತಿದ್ದ ಗಂಡು ಮಾತ್ರ ಒಂದು ನೀಲಿ ಇಜಾರ, ಕೆಂಪು ಜುಬ್ಬ, ಕೆಂಪು ಟೋಪಿ, ಕರೀ ಕನ್ನಡಕ, ಚಿಗುರು ಹುರಿ ಮೀಸೆ,

ಧರಿಸಿ, ಕೈಲಿ ಹಂಟಿಂಗ್ ಹಿಡಿದು, ನೋಡಿದರೆ ಅಮೆರಿಕಾ ಕೌ-ಬಾಯ್ (cow boy) ಸಿನಿಮಾದಲ್ಲಿ ನಾಯಕನ ಕಡೆ ವಿದೂಷಕನಂತೆ ಕಾಣುತ್ತಿದ್ದ.

ಮುಂದಿದ್ದ ಹೆಣ್ಣು-ಗಂಡು, ಏನೋ ಗೊಣಗುಟ್ಟುವುದಕ್ಕೆ ಹತ್ತಿದರು. ಅಥವಾ ವೈಕ್ ಇಲ್ಲದ್ದರಿಂದ ಅವರ ಸಂಭಾಷಣೆ ಆ ರೀತಿ ನನಗೆ ತೋರಿರಬಹುದು. ಹಿಂದಿದ್ದ ವಿದೂಷಕ ತಲೆ ಅಲ್ಲಾಡಿಸುತ್ತಿದ್ದ. ಇದ್ದಕ್ಕಿದ್ದ ಹಾಗೆ ಸ್ಟೇಜಿನ ಹತ್ತಿರದ ಸೋಫಾದಿಂದ ಧ್ವನಿ ಎದ್ದಿತು.

" ಅಪ್ಪಾ ಅಲ್ಲಿ ನೋಡಪ್ಪಾ ಕಪ್ಪೆ ಬಾಯಿ ಆಸಾಮಿ ! "

ನನ್ನ ಕಿವಿ ನೆಟ್ಟಗಾಯ್ತು. ಆ ಮಾತು, ಆ ಧ್ವನಿ ನನಗೆ ಪರಿಚಯವಿದ್ದ ಹಾಗೆ ಕಂಡಿತು.

" ಯಾರು ಮಗೂ ? " ಅಂತ ಮತ್ತೊಂದು ಧ್ವನಿ.

" ಅದೇ ಅಪ್ಪ— ಅಲ್ಲಿ ಹಿಂದುಗಡೆ ಸರ್ಕಸ್ ಬಫೂನ್ ಹಾಗೆ ಆಡ್ತಾ ಇದ್ದಾನಲ್ಲ ಅವನು ! "

ಅಷ್ಟರಲ್ಲಿ ಸ್ಟೇಜಿನ ಮೇಲಿದ್ದ ವಿದೂಷಕ ಮುಂದೆ ಬಂದ.

" ಬಾಯಿ ಮುಚ್ಕೊ ಪೋಕರಿ ! ಯಾರು ಕಪ್ಪೆ ? ಯಾರು ಬಫೂನ್ ? ನೀನು ಕಪ್ಪೆ ! ನಿನ್ನಪ್ಪ ಬಫೂನ್ !! ನಿನ್ನಜ್ಜಿ ಕಪ್ಪೆ !!! "

ನನಗೆ ತಲೆಯಮೇಲೆ ಹಂಟಿಂಗ್‌ನಿಂದ ಬಾರಿಸಿದ ಹಾಗಾಯ್ತು. ಜಗನ್ನಾಥ ! ರಿಹರ್ಸಲ್‌ನಲ್ಲಿ ಇದೇ ಅವನ ಮೊದಲ ಸಂಭಾಷಣೆ !

" ಯಾರಯ್ಯ ನೀನು ? ನನ್ನ ಮಗನ್ನ ಮತ್ತು ನನ್ನ ಈ ರೀತಿ ಬಯ್ಯೋಕೆ ಯಾವನಯ್ಯ ನೀನು ? " ಅನ್ನುತ್ತಾ ಸೋಫಾದಿಂದ ಒಬ್ಬಾತ ಎದ್ದ.

" ನಾನೇ ? ನಾನು ಜಗನ್ನಾಥ ಬಿ. ಎ. ಈ ಪೋಕರಿ ಹುಡುಗ ಪುನಃ ಬಾಯಿ ಬಿಟ್ಟರೆ ಹಲ್ಲು ಉದುರಿಸಿ, ನಿನ್ನ ಕೈಗೆ ಕೊಟ್ಟೇನು ! " ಅಂದ ಜಗನ್ನಾಥ.

ನಿಜವಾಗಿ ಈ ಸಂಭಾಷಣೆ ನಾಟಕದ ಅಂಗವಾಗಿದ್ದಿದ್ದರೆ ಚೆನ್ನಾಗಿತ್ತು ಅನ್ನಿಸಿತು.

" ಪ್ರೊಯ್ರೈತಂಬಿ ! ಈ-ಈ-ಕಪ್ಪೆಬಾಯಿ ಆಸಾಮಿಯನ್ನ ಸ್ಟೇಜಿಂದ ತಳ್ಳು ಹೊರಗೆ. ಇಂತಹ ಅನಾಗರಿಕರು ನಮ್ಮ ಸಂಘಕ್ಕೆ ಬೇಡ ! " ಅನುತ್ತಾ ಸೋಫಾ ಆಸಾಮಿ ಸ್ಟೇಜಿನ ಕಡೆ ಧಾವಿಸಿದ.

ನಾನು ಅದೇ ಘಳಿಗೆಯಲ್ಲೇ ಮನೆ ಕಡೆ ಸೇರಿದೆ. ಆ ಸ್ಥಿತಿಯಲ್ಲಿ ಜಗನ್ನಾಥನ್ನ ಭೇಟಿ ಮಾಡಲು ನನಗೆ ಮನಸ್ಸು ಬರಲಿಲ್ಲ.

ರಿಹರ್ಸಲ್ ಚೆನ್ನಾಗಿತ್ತೆ ಸರ್ ! " ಅಂತ ಕೇಳಿದ ಶೌರಿ.

ಶೌರಿಯ ಮುಖ ನೋಡಿದ ತಕ್ಷಣ ನನ್ನ ಮನಸ್ಸಿನಲ್ಲಿ, ಏನೋ ಹೊಳೆದ ಹಾಗಾಯ್ತು.

"ಶೌರಿ—ನಿಜ ಹೇಳು ಆ ಬಾಲ ಬಕಾಸುರ ಆ ಹುಡುಗನ್ನ ನೀನೇನೇ ಜಗನ್ನಾಥನ ಮೇಲೆ ಛೂ ಬಿಟ್ಟಿದ್ದು?" ಅಂತ ಕೇಳಿದೆ.

"ಸರ್?" ಅಂದ ಏನೂ ತಿಳಿಯದವನ ಹಾಗೆ!

ಶೌರಿಯ ಕೆನ್ನೆಗೆ ಎರಡು ಬಿಡಲೇ ಅನ್ನಿಸಿತು. ಆದರೆ ಆ ಕೆಲಸ ಮಾಡಿ ಜಯಿಸಿಕೊಂಡವರಿಗೆ ಸಾವಿರ ರೂಪಾಯಿ ಇನಾಮು ಕೊಡುತ್ತೀನೆ!

ಪುನಃ ಒತ್ತಿ ಹೇಳಿದೆ. ರಿಹರ್ಸಲ್ ನಡೆದ ಸಮಾಚಾರ ಪೂರ್ತಿ ಹೇಳಿದೆ.

"ಪ್ರಾಯಶಃ ಅವತ್ತು ಆ ಹುಡುಗ ಮತ್ತು ಅವನ ಮನೆ ಡ್ರೈವರ್ ಇಲ್ಲಿಗೆ ಬಂದಿದ್ದರು ಸರ್ ಆಗ ಅದೂ ಇದೂ ಮಾತನಾಡ್ತಾ ಜಗನ್ನಾಥರಾಯರಿಗೆ ನಾಟಕದ ಹುಚ್ಚು ಬಿಡಿಸಿದವರಿಗೆ ನನ್ನ ಯಜಮಾನರು ಹತ್ತು ರೂಪಾಯಿ ಇನಾಮು ಕೊಡ್ತಾರೆ ಅಂತ ಹೇಳಿದ್ದುಂಟು ಸರ್."

"ಆ ಹುಡುಗ ಯಾರು ಶೌರಿ?"

ಆ. ದ್ರಾ. ಸ. ಬಾ. ಕ. ಕೋ. ಸಂಘದ ಅಧ್ಯಕ್ಷ ಮಾರ್ತಾಂಡ ಪಿಳ್ಳೆಯವರ ಮಗ ಆರ್ಮುಗ ಸರ್".

"ಸರಿ ಶೌರಿ ಆರ್ಮುಗನಿಗೆ ಹತ್ತು ರೂಪಾಯಿ ಕೊಡು ಪರವಾಗಿಲ್ಲ" ಅಂದೆ.

"ಅವತ್ತೇ ಕೊಟ್ಟಿದ್ದೇನೆ ಸರ್" ಅಂದ.

ಮರುದಿನ ಮಧ್ಯಾಹ್ನವೇ ಪುನಃ ಜಗನ್ನಾಥನ ಭೇಟಿ ನನಗೆ ಆಗಿದ್ದು.

ಪಾಂಡುರಂಗರಾವ್—ಕಾಂಗ್ರಾಜುಲೇಟ್ ಮಾಡಿ ನನ್ನ! ಲಾ ಕಾಲೇಜಿಗೆ ಫೀಸ್ ಕಟ್ಟಿ, ಹಾಸ್ಟಲಿಗೆ ಅಡ್ವಾನ್ಸ್ ಕೊಟ್ಟು ಬಂದಿದ್ದೇನೆ." ಅಂದ.

"ಹಾಗಾದರೆ ನಾಟಕದ ಗತಿ?"

"ಇಲ್ಲ ಪಾಂಡುರಂಗರಾವ್ ದೀರ್ಘವಾಗಿ ಆಲೋಚಿಸಿದೆ ತಂದೆತಾಯಿಗಳ ಮಾತನ್ನು ಮೀರುವುದು ನನಗೆ ಶುಭವಲ್ಲ. ನಾಟಕಕ್ಕೆ ಸ್ವಲ್ಪ ತೊಂದರೆಯಾಗುತ್ತೆ ನಿಜ. ಆದರೆ ನಿಮ್ಮ ಶೌರಿ ಹೇಳಿದ್ದಾನೆ ಪ್ರೊಯ್ಯಿ ತಂಬೀಗೆ ಸಮಾಧಾನ ಹೇಳ್ತೀನೆ ಅಂತ. ಹಾಗೂ ಆ ಹಾಳು ನಾಟಕಕ್ಕೆ ನಾನು ಹೋಣೇನೆ?"

"ಷಹಭಾಸ್ ಜಗನ್ನಾಥ್ ನೀವು ಮಾಡಿದ್ದು ಸರಿ. ಏನು ಶೌರಿ?"

"ಸರಿ ಸರ್" ಅಂದ ಶೌರಿ.

—"ಶೇಷ"

ಸ್ವಾರ್ಥ ಕೋಶ

ಸುತ್ತಲೂ ಲತ್ತೆ ಕೊಡುವ [ಅಸಾಧ್ಯವಾದರೆ ತಿನ್ನುವ] ಕತ್ತೆ

ಲಕ್ಷ್ಮಿ : ಲೇಖಕನ ಕನಸಿನ ರಾಣಿ

ಲಕ್ಷ್ಮೀಶ : ಲಿಮಿಟೆಡ್ ಬ್ಯಾಂಕಿನ ಜನರಲ್ ಮ್ಯಾನೇಜರ್.

ಲೋಟ : ಬಡವರ ಮನೆಯ ಕುಡಿಯುವ ಪಾತ್ರೆ.

ನಗು : ಹೊಟ್ಟೆಕಿಚ್ಚಿನ ಪ್ರತ್ಯಕ್ಷ ರೂಪ.

ನೀರು : ಗೌಳಿಗನ ಕಾಮಧೇನು.

ನಾಳೆ : ಧನ ಸಹಾಯ ಕೇಳಲು ಬಂದವರಿಗೆ ಬೇರೇನೂ ಹೇಳಲು ಅಸಾಧ್ಯವಾದಾಗ ಈ ಶಬ್ದ ಉಪಯೋಗಕ್ಕೆ ಬರುತ್ತದೆ.

ಜನತೆ: ರಾಜಕಾರಣಿಗಳು ಹಾಗೂ ಬುದ್ಧಿವಂತರ ಪ್ರಯೋಗ ಯಂತ್ರದ ಮಧ್ಯೆ ಸಿಕ್ಕು, ಹಣ್ಣಾದ ಒಂದು ಪ್ರಾಣಿ ವರ್ಗ.

ಜೈಲು : ಕದ್ದು, ಸಿಕ್ಕಿಬಿದ್ದ ಬಗೆ ಹೇಗೆಂದು ಚಿಂತಿಸಿ, ಇನ್ನು ಆ ರೀತಿ ಸಿಕ್ಕಿಬೀಳದಂತೆ ಉಪಾಯ ಯೋಚಿಸುವ ಯೋಚನಾಗಾರ.

ಜಯಂತಿ : ಸತ್ತಮೇಲೆ ಹುಟ್ಟಿದ ಹಬ್ಬ ಆಚರಿಸುವ ದಿನ.

ಜಂಜಾಟ : ಸಾಹಿತಿಯ ಹೆಂಡತಿ ಆತನ ಆತ್ಮಪ್ರಶಂಸೆ ಕೇಳಿದಾಗ ಬೇಕೆಂದೇ ಎಬ್ಬಿಸುವ ಒಂದು ಕೊಂಗಾಟ.

— ಎನ್. ನಾರಾಯಣ ಬಲ್ಲಾಳ

ಪಂಚತಂತ್ರದ ಪ್ರಾಣಿಗಳು ಸುಹೃತ್ ಲಾಭ, ಮಿತ್ರಭೇದ ಇತ್ಯಾದಿಗಳನ್ನು ಆಚರಿಸಿ ಬಾಳಿದವಂತೆ—

—ಪಂಚಶೀಲದ ಪ್ರಾಣಿ ಹೆಡೆಯೆತ್ತಿ ಹರಿದಾಡುವಾಗ, ಸುಹೃತ್‌ನಾಶ, ಮಿತ್ರದ್ರೋಹ ಇತ್ಯಾದಿಗಳನ್ನು ಆಚರಿಸುತ್ತಿದೆಯಂತೆ—

ಅಂದಮೇಲೆ ಶೀಲ ಅಂದರೆ ತಂತ್ರ ಅಂತ, ಅದರ ಅರ್ಥ.

ಕೋಲಿ ಹಿಡಿದ ಕನ್ಯೆ

"ನಾಳೆ ನಿನ್ನ ಜೊತೆಗೆ ಬರುಕ್ಕಾಗುಲ್ಲ ಶಾರಿ, ನಮ್ಮ ಸೋದರತ್ತೆ ಮನೆಗೆ ಹೋಗಬೇಕು. ಯಾವುದೋ ವ್ರತ ಮಾಡ್ತಾರಂತೆ ಒಬ್ಬರೇ ಇರೋದು, ಸಹಾಯಕ್ಕೂ ಆಯಿತು, ಹಾಗೂ ಪ್ರಸಾದ ತೆಗೆದುಕೊಳ್ಳಕ್ಕೆ ಕೂಡ ಬಾ ಅಂತ ಕಾಗದ ಬರೆಸಿದ್ದಾರೆ. ಬಸವನಗುಡೀಗೆ ಹೋಗಬೇಕು ಅಂದರೆ ಮಧ್ಯಾಹ್ನ ಮೂರು ಗಂಟೆಗೆ ಕ್ಲಾಸಿಗೆ ಚಕ್ಕರ್ ಕೊಟ್ಟು ಹೋಗ್ಬೇಕು" ಎಂದು ಲೀಲ, ಕಾಲೇಜ್ ಕ್ಯಾಂಟೀನಲ್ಲಿ ಶಾರದೆಗೆ ಮಂಗಳವಾರದ ಮಧ್ಯಾಹ್ನ ಹೇಳ್ತಾ ಇದ್ದಳು.

ಕಾಲೇಜ್ ಕ್ಯಾಂಟೀನ್ ಕಂಬದ ಆಚೆ ಕೂತು ತಿಂಡಿ ತಿನ್ನುತ್ತಿದ್ದ ಬಾಲ ಗೋಪಾಲನಿಗೆ ಇದೆಲ್ಲವೂ ಕೇಳಿಸಿತು. ಲೀಲನ್ನ ಕಂಡಾಗಲೆಲ್ಲಾ ಅವನ ಎದೆ ಬಡಿತವು ಅಸ್ತವ್ಯಸ್ತವಾಗುತ್ತಿತ್ತು. ಮುಖ ಕೆಂಪೇರುತ್ತಿತ್ತು. ಯಾಕೆ ಹೀಗೆ ಆಗುತ್ತೆ ಅಂತ ತಿಳಿಯದು ಆದರೂ ಲೀಲನ ಹತ್ತಿರ ಮಾತನಾಡ್ತಾ ಇದ್ದರೆ ಸ್ವಲ್ಪ ಸಮಾಧಾನ ಆಗ್ತಾ ಇತ್ತು, ಆದರೆ ಲೀಲ ಅವನ ಹತ್ತಿರ ಮಾತನಾಡುಕ್ಕೆ ಇಷ್ಟಪಡ್ತಾ ಇರ್ಲಿಲ್ಲ, ಅವಕಾಶವೂ ಕಡಿಮೆ.

ಕಾಫಿ ಕುಡಿಯುತ್ತಾ, ಲೀಲನ ಮಾತು ಕೇಳಿದಾಗ, ಬಾಲಗೋಪಾಲನಿಗೆ ಸ್ಫೂರ್ತಿ ಬಂತು. ಮಾರನೆದಿನ ಮಧ್ಯಾಹ್ನ 3 ಗಂಟೆ ಹೊತ್ತಿಗೆ ಸೋದರತ್ತೆ ಮನೆಗೆ ಹೋದ. "ಅಮ್ಮಾ! ನೀವು ಲೀಲನ ಸೋದರತ್ತೇನೆ?" ಎಂದು ಕೇಳಿದ "ಹಾದಪ್ಪ! ಅದನ್ನ ಕೇಳುಕ್ಕೆ ಬಂದೆಯಾ ಅಥವಾ ಇನ್ನೇನಾದರೂ ಸುದ್ದಿ ಇದೆಯೇ? ಏನಾರೂ ಬೇಕಾಗಿತ್ತೆ? ಎಂದಳು ಸೋದರತ್ತೆ. ಲೀಲನಿಗೆ ಹೊಟ್ಟೆನೋವು ಬಂತು ಕಾಲೇಜಿಂದ ನೆಟ್ಟಗೆ ಆಸ್ಪತ್ರೆಗೆ ಸಾಗಿಸಿದರು. ಆಗ ಲೀಲ ಹೇಳಿದಳು, ಬಾಲು, ನಮ್ಮ ಸೋದರತ್ತೇಗೆ ಈ ಸುದ್ದಿ ತಿಳಿಸಿ, ಆಕೇನ ಆಸ್ಪತ್ರೇಗೆ ಆದಷ್ಟು ಬೇಗ ಕಳಿಸು ಅಂದಳು ಅದಕ್ಕೇ ಬಂದೇಮ್ಮಾ" ಎಂದ ಬಾಲಗೋಪಾಲ. "ಮನೆ ಬಿಟ್ಟು ಹ್ಯಾಗಪ್ಪ ಹೋಗೋದು, ಒಬ್ಬಳೇ ಇರೋಳು, ಸಂಜೆ ಪೂಜೇಗೆ ಅಣಿ ಮಾಡ್ತಿದ್ದೆ. ಅದನ್ನು ಮುಗಿಸಿಬಿಟ್ಟು ಹೋದರೆ ಆದೀತು ಅಲ್ಲವೇ" ಎಂದಳು ಸೋದರತ್ತೆ.

"ಇಲ್ಲಮ್ಮಾ, ಈಗಲೇ ಹೋಗಿ; ನಾನು ಬಂದ ಆಟೋರಿಕ್ಷಾ ಇಲ್ಲೇ ಇದೆ ಅದರಲ್ಲೇ ಹೋಗಿ; ಮನೇನ ನಾನು ಕಾದುಕೊಂಡಿರ್ತೀನಿ, ನೀವು ಹಿಂತಿರುಗಿ ಬರೋತನಕ, ನೀವು ಹೋದರೆ ಲೀಲನಿಗೆ ತುಂಬಾ ಸಮಾಧಾನವಾಗುತ್ತೆ. ತುಂಬಾ ಸಂಕಟಪಡ್ತಾ ಇದ್ದಳು" ಎಂದ ಬಾಲಗೋಪಾಲ.

" ಹಾಗೇ ಆಗಲಪ್ಪ! ಆದಷ್ಟು ಬೇಗ ಬಂದುಬಿಡ್ತೀನಿ, ಸ್ವಸ್ಥ ಆದರೆ ಲೀಲನ್ನೂ ಕರಕೊಂಡು ಬರ್ತೀನಿ, ಇಲ್ಲೇ ಇರಪ್ಪ" ಅಂತ ಹೇಳಿ, ಸೋದರತ್ತೆ ಆಟೋರಿಕ್ಷಾ ಹತ್ತಿ ದೂರದ ಆಸ್ಪತ್ರೆಗೆ ದಡಬಡಗುಟ್ಟುತ್ತಾ ಹೊರಟು ಹೋದಳು.

ಬೇಗ ಬಾಲಗೋಪಾಲ ಮನೆಯೊಳಕ್ಕೆ ಹೋಗಿ ಸೋದರತ್ತೆ ಕೆಂಪು ಸೀರೆ ಒಂದನ್ನು ಕಟ್ಟಿಕೊಂಡ, ವಾರಣವಾಗಿ ಮುಸುಕು ಹಾಕಿಕೊಂಡ, ಅಡಿಗೆಮನೇಲಿ ತುಪ್ಪಾಳಿ ಮಾಡುಕ್ಕೆ ಸಿದ್ಧಮಾಡುವಂತೆ, ಬಾಳೆಹಣ್ಣು, ಕರ್ಜೂರ, ಗೋಡಂಬಿ ದ್ರಾಕ್ಷಿ ಎಲ್ಲವನ್ನು ಹರವಿಕೊಂಡು, ಮಣೆಮೇಲೆ ಕುಕ್ಕರುಗಾಲು ಹಾಕಿಕೊಂಡು ಕುಳಿತ. ಅಷ್ಟು ಹೊತ್ತಿಗೆ ಪಕ್ಕದಮನೆಯ ಗಡಿಯಾರ ನಾಲ್ಕು ಬಾರಿಸಿತು.

" ಸೋದರತ್ತೆ, ಚೆನ್ನಾಗಿದ್ದೀಯಾ! ಎಷ್ಟೋ ಬೇಗ ಬರೋಣ ಅಂತ ಹೊರಟೆ! ಆದರೆ ಆ ಹಾಳು ಬಸ್ಸು ಕೊಂಕಣ ಸುತ್ತಿ ಮೈಲಾರಾನ ಬಳಸಿ, ಬಸವನಗುಡೀಗೆ ಬರೋಹೊತ್ತಿಗೆ ಇಷ್ಟು ಹೊತ್ತಾಯ್ತು" ಅಂತ ಹೇಳ್ತಾನೇ ಮನೆಯೊಳಕ್ಕೆ ಲೀಲ ಬಂದಳು. ಅಡಿಗೆ ಮನೆ ಬಾಗಿಲಲ್ಲಿ ನಿಂತುಕೊಂಡಳು.

ಲೀಲನ ಧ್ವನಿ ಕೇಳುತ್ತಿದ್ದ ಹಾಗೇ ಬಾಲಗೋಪಾಲನ ಎದೆ ಡವ ಡವಕೆ, ಆರಂಭಿಸಿತು. ಹಣೆಯೆಲ್ಲಾ ಕೆಂಚೇರಿತು. ಹಣೆಯಮೇಲಿನ ಮುಸುಕಿನಿಂದಲೇ ಒರೆಸಿಕೊಂಡು, ಧ್ವನಿಯನ್ನು ಮಾರ್ಪಡಿಸಿಕೊಂಡು, " ಬಾಮ್ಮ ಲೀಲ, ಬಂದೆಯಲ್ಲಾ ಪುರುಸೊತ್ತು ಮಾಡಿಕೊಂಡು, ಬಚ್ಚಲಮನೆಗೆ ಹೋಗಿ ಕೈಕಾಲು ತೊಳೆದುಕೊಂಡು ಬಾಮ್ಮ! ಸುಸ್ತಾಗಿರಬೇಕು! ಪಾನಕ ಮಾಡಿಟ್ಟಿದೀನಿ, ಆಮೇಲೆ ಕುಡಿಯೋವಂತೆ" ಎಂದು ಮುಖ ಈ ಕಡೆಗೆ ತಿರುಗಿಸದೆಯೇ ಹೇಳಿದ.

ಲೀಲ ಬಚ್ಚಲಮನೆಗೆ ಹೋಗಿ ಮುಖ ತೊಳೆದುಕೊಂಡಳು, ಅವಳನ್ನೂ ಯೋಚನೆಯು ಕಾಡಹತ್ತಿತ್ತು. ಯಾವಾಗ ಬಂದರೂ ಸೋದರತ್ತೆ ಓಡಿಬಂದು ಬಾಚಿ ತಬ್ಬಿಕೊಳ್ಳುತ್ತಿದ್ದಳು. ಇವತ್ತು ಯಾಕೆ ಹೀಗೆ ಮಾಡಿದಳು? ಎಂದು ಅನುಮಾನ ಕಾಡಹತ್ತಿತ್ತು.

ಬಾಲ್ಯದಲ್ಲಿ ಲಿಟಲ್‌ರೆಡ್ ರೈಡಿಂಗ್ ಹುಡ್ ಅನ್ನು ಅವಳು ಓದಿದ್ದಳು. ಕಾಲೇಜಿನ ಗಂಡು ಸಹಪಾಠಿಗಳ ತೋಳಸ್ವಭಾವವನ್ನು ಅವಳೂ ಅರಿತಿದ್ದಳು. ಬಂದೂಕು ಅಭ್ಯಾಸದ ಕ್ಲಾಸುಗಳಿಗೆ ತಪ್ಪದೆ ಹೋಗಿ, ಯಶಸ್ವಿಯಾಗಿ ತೇರ್ಗಡೆ ಹೊಂದಿದ್ದ ಹುಡುಗಿಗೆ, ಹುಷಾರುತನ ಸಹಜವಾಗಿಯೇ ಇತ್ತು. ಬಚ್ಚಲಮನೆಯಿಂದ ಹಿಂದಿರುಗುವಾಗ ಕೈಚೀಲದಿಂದ, ಯಾವಾಗಲೂ ಸ್ವರಕ್ಷಣೆಗೆ ಇರಿಸಿಕೊಂಡಿದ್ದ ಸಣ್ಣ ಪಿಸ್ತೂಲನ್ನು ಬಲಗೈಯಲ್ಲಿ ಹಿಡಿದುಕೊಂಡೇ ಅಡಿಗೆ ಮನೆಯ ಬಾಗಿಲಹತ್ತಿರ ಬಂದು ನಿಂತುಕೊಂಡಳು.

ಆ ವೇಳೆಗೆ ಬಾಲಗೋಪಾಲ ಸ್ವಲ್ಪ ಧೈರ್ಯಗೊಂಡಿದ್ದ. ಇಷ್ಟೆಲ್ಲಾ ಸಾಧಿಸಿದೋನು, ಈಗ ಬೆಚ್ಚಿದರೆ, ಮಾಡಿದ್ದೆಲ್ಲಾ ಮಣ್ಣುಪಾಲಾಗುತ್ತಲ್ಲಾ ಎಂದು ತನ್ನನ್ನು ತಾನೇ ಹುರಿದುಂಬಿಸಿಗೊಂಡಿದ್ದ. ಆದುದರಿಂದಲೇ ಎದ್ದುನಿಂತು, ಬಲಗಡೆ ಇದ್ದ ಬಡುವಿನ ಕಡೆಗೆ ಹೋಗಿ, ಅಲ್ಲಿದ್ದ, ಪಾನಕದ ಬಟ್ಟಲನ್ನು ಕೈಗೆ ತೆಗೆದುಕೊಂಡ

ಎದ್ದುನಿಂತ ಠೀವಿಯಿಂದಲೇ, ಲೀಲಳ ಅನುಮಾನ ಹೆಚ್ಚಾಯ್ತು. ಸೋದರತ್ತೆ ಎದ್ದರೆ, ಟಕ್ ಅಂತ ಎದ್ದುನಿಲ್ಲುತ್ತಿದ್ದಳು. ಮುದುಕಿಯ ಸೊಂಟ ಅಷ್ಟು ಬಿಗಿಯಾಗಿತ್ತು. ಆದರೆ ಬಾಲಗೋಪಾಲ ಎದ್ದಾಗ, ಸೊಂಟ ಕಳಚಿಕೊಂಡೋರು ಮಂಡಿ ಮೇಲೆ ಕೈ ಇರಿಸಿ ತಮ್ಮ ಮೈಮೇಲೆ ತಾವೇ ಹತ್ತುವುದಿಲ್ಲವೇ, ಹಾಗೆ ಎದ್ದುನಿಂತಿದ್ದ. ಮುಖ ನೋಡಿದಾಗ ಲೀಲಳ ಅನುಮಾನ ಜೋರಾಯ್ತು ಸೋದರತ್ತೆಗೆ ಸ್ವಲ್ಪವಾದರೂ ಕಣ್ಣಿಗೆ ಕಾಣಿಸುವಂತೆ ಚಿಗುರುಮೀಸೆ ಇತ್ತು. ಆದರೆ ಬಾಲಗೋಪಾಲನ ಮೇಲ್ತುಟಿ, ಮಕ್ಕಳ ತರಹಾ ಮಿಂಚುತ್ತಿತ್ತು. ತಲೆಮುಸುಕನ್ನು ಸೋದರತ್ತೆ ಯಾವಾಗಲೂ ಕಿವಿ ಹಿಂದೆ ಲಕ್ಷಣವಾಗಿ ಸಿಕ್ಕಿಸಿಕೊಳ್ಳುತ್ತಿದ್ದಳು. ಆದರೆ ಬಾಲಗೋಪಾಲ ಕಿವಿಗಳನ್ನು ಮುಸುಕಿನಿಂದ ಪೂರ್ತಿ ಮುಚ್ಚಿಕೊಂಡಿದ್ದ.

ಲೀಲಳಿಗೆ "ಇದರಲ್ಲೇನೋ ಮೋಸ ಇದೆ" ಅಂತ ಖಂಡಿತವಾಯ್ತು ಕಾಲೇಜಿನ ಯಾವುದೋ ಶೋಳ ಈ ಆಟಾನ ಹೂಡಿರಬಹುದು ಎಂದೂ ಅನ್ನಿಸಿತು. ಬುದ್ಧಿ ಕಲಿಸಬೇಕು ಇದಕ್ಕೆ, ಮರೆಯದೇ ಇರೋಹಾಗೆ ಅಂತ ನಿಶ್ಚಯ ಮಾಡಿದಳು.

ಪಿಸ್ತೂಲನ್ನು ಬಡುವಿನ ಪಕ್ಕದಲ್ಲಿ ನಿಂತಿದ್ದ ಬಾಲಗೋಪಾಲನ ಎದೆಗೆ ಗುರಿ ಹಿಡಿದು, "ಬಟ್ಟಲು ಅಲ್ಲೇ ಇಡು! ಸೀರೆ ಕಳಚು, ಅಂತ ಅಧಿಕಾರವಾಣಿಯಲ್ಲಿ ಕೂಗಿದಳು. ಬಾಲಗೋಪಾಲ ಒಂದುನಿಮಿಷ ಸುಮ್ಮಗಿದ್ದ. ಯೋಚಿಸುತ್ತಿದ್ದ.

ಪಿಸ್ತೂಲನ್ನು ಒಮ್ಮೆ ಬಾರಿಸಿದಳು ಬಾಲಗೋಪಾಲನ ಕೈಯಲ್ಲಿದ್ದ ಬಟ್ಟಲಿಗೆ ಗುಂಡು ತಾಕಿ ಅದು ಕೆಳಕ್ಕೆ ಬಿತ್ತು. ಬಾಲಗೋಪಾಲನಿಗೆ ಅರ್ಥವಾಯಿತು "ಕೆರಳಿದ ಈ ಹೆಣ್ಣು ರಾಕ್ಷಸವೈರಿ ಚಾಮುಂಡಿಯ ದೃಡ ನಿಶ್ಚಯವನ್ನೇ ಹೊಂದಿದ್ದಾಳೆ" ಎಂದು.

ಸೀರೆಯನ್ನು ಕಳಚಿದ. ಪೈಜಾಮ ಜುಬ್ಬ ಧಾರಿಯಾಗಿ ನಡುಗುತ್ತ ನಿಂತ.


ಆ ವೇಳೆಗೆ ಸೋದರತ್ತೆ ಹಿಂತಿರುಗಿದಳು. ಆಸ್ಪತ್ರಿಗೆ ಹೋಗುವ ದಾರಿಯಲ್ಲಿ ಕಾಲೇಜು ಸಿಕ್ಕಿತ್ತು. ಅಲ್ಲೇ ಇಳಿದು, ಪ್ರಿನ್ಸಿಪಾಲರನ್ನು ವಿಚಾರಿಸಿದಾಗ, ಲೀಲಳಿಗೆ ಏನೂ ಆಗಿತ್ತಿಲ್ಲ, ಸೋದರತ್ತೆ ಮನೆಗೆ ಹೋಗುತ್ತೇನೆ ಎಂದು ರಜಾಚೀಟಿ ಬರೆದು ಕೊಟ್ಟು ಹೋದಳು ಅಂತ. ವಿಮಾನದ ವೇಗದಲ್ಲೇ ಸಾಮಾನ್ಯವಾಗಿ ಆಟೋರಿಕ್ಷಾ ಓಡೋದು. ಸೋದರತ್ತೆ ಈಗ ಆಟೋರಿಕ್ಷಾದವನನ್ನು ರೇಗಿಸಿ, ಜೆಟ್ ವಿಮಾನದ ತರಹ ನಾಗಾಲೋಟ ಓಡಿಸಿದಳು. ಮನೆಗೆ ಹಿಂತಿರುಗಿ ಬರೋವೇಳೆಗೆ, ಲೀಲ

ಅಡಿಗೆ ಮನೆಯ ಹೊಸಲಿನ ಮೇಲೆ ಪಿಸ್ತೂಲು ಹಿಡಿದು ನಿಂತಿದ್ದಾಳೆ. ಅಡಿಗೆಮನೆ ಬಡುವಿನ ಹತ್ತಿರ ಬಾಲಗೋಪಾಲ ಬೆವರುತ್ತ ನಡುಗುತ್ತ ನಿಂತಿದ್ದಾನೆ.

ಸೋದರತ್ತೆ ಆನಂತರ ಕಾರ್ಯೋನ್ಮುಖಳಾದಳು. ಕೆಂಪುಸೀರೆಯನ್ನೇ ಅವನಿಗೆ ಉಡಿಸಿ, ಅವನ ಪೈಜಾಮಾ ಜುಬ್ಬಗಳನ್ನು ತೆಗೆಸಿಸಿ, ಗಂಟು ಕಟ್ಟಿದಳು ಅದನ್ನು ಕಾಲೇಜು ಪ್ರಿನ್ಸಿಪಾಲರಿಗೆ ಆಟೋರಿಕ್ಷಾದವನ ಕೈಲಿ ಕಳಿಸಿದಳು. ಕೆಂಪುಸೀರೆ ಉಟ್ಟ ಬಾಲಗೋಪಾಲನನ್ನು ಹಾಸ್ಟಲಿಗೆ ಕಳಿಸಿದಳು ವ್ರತ ಆಮೇಲೆ ಸಾಂಗವಾಗಿ ನಡೆಯಿತು ಅನ್ನಿ.

ನೀತಿ :—ಕನ್ಯೆ ಕೋವಿ ಹಿಡಿದರೆ, ಗಂಡು ಕೆಂಪುಸೀರೇನ ಉಡಲೇಬೇಕು!

—ಕುಮಾರ್.



ಇಲ್ಲೇನು ಸಿಕ್ತದೆ! ಲೊಟ್ಟೆ!!



ಅಪ್ಪ ಕೊಟ್ರು ಕಣೋ ! ಹಾಕ್ಕೊಂಡಿರು, ಸ್ಕೂಲಿಗೆ ಮಂತ್ರಿಗಳು ಬಂದಾಗ,
ಅವರಿಗೆ ಕೊಡು ಅಂತ.

* * * *

ಸಂಸಾರ ನೌಕೆ

ಒಂದ್ ಸಂಸಾರಕ್
ಒಂದೂವರೆ ಡಜನ್ ಮಕ್ಳು
ಅಂಕೆ ಅಂಶ ಅವೆಲ್ಲ ಸುಳ್ಳು—ಆದ್ರೇನ್....
ಹುಟ್ಟೋವೆಲ್ಲ ಹುಟ್ಲಿ
ಅದ್ಕೆ ಬೇಡ ಅನ್ನೋದ್ ತಪ್ಪು
ಹುಟ್ಸಿದ್ ದೇವರು ಮೇಸೊಲ್ಲ ಹುಲ್ಲು !
ಹೆಗಲಿಗೆ ನೊಗ ಕಟ್ಕೊಂಡ್
ದುಡಿಯೊದೊಂದ್ ಜೀವ
ಹಿಂದಿನ್ ಜನ್ಮದಾಗೇನ್ ಪಾಪ ಮಾಡಿತ್ತೊ ? !....
ಎಳೆದದ್ದೇ ಎಳೆದದ್ದು....
ಕೆಸರಾಗ್ಹೊತ್ರೈಕೆ ತುಂಬಿದ ಬಂದಿ
ಸಾಕು ಶಿವನೆ ಸಂಸಾರಿಯ ಕಣ್ಮುಚ್ಕೊ.

—ಬಿಜಾಯ್

ಪ್ರಭಾವ ಬೀರಿದ ಪುಸ್ತಕ

ಪ್ರಭಾವ ಬೀರಿದ ಪುಸ್ತಕಗಳ ಬಗ್ಗೆ ಉಪನ್ಯಾಸ ಮಾಡಲು, ಪ್ರತಿಭಾವಂತ ಹಿರಿಯ ವ್ಯಕ್ತಿಗಳನ್ನು ಕೆಣಕಿ, ಅವರು ಹಳೆಯ ಕಹಿಯನ್ನೆಲ್ಲ ನೆನೆದು ಅದರಲ್ಲಿನ ಸಿಹಿಯನ್ನು ನೆನೆದು ಇದು ಹಾಗೆ ಇದು ಹೀಗೆ ಹೇಳಿದ್ದ ಉದುವಾಡಿ. ಆದರೆ ಕೇವಲ ಸುಪ್ರಸಿದ್ಧ ಪ್ರತಿಷ್ಠಿತರಮೇಲೆ ಮಾತ್ರ ಈ ಪುಸ್ತಕಗಳು ಪ್ರಭಾವ ಬೀರಿರುವುವೆ? ಜನಸಾಮಾನ್ಯರನ್ನು ಇವು ಕಾಡಿಲ್ಲವೆ? ಯಾವುದೊ ಗಾರ್ನ್ನರು ಯಾರೋ ಸಾಹಿತಿಗಳನ್ನು ಮಾತ್ರಾ ಯಾಕೆ ವಿಚಾರಿಸಿದಿರಿ? ಸಮಾನಾವಕಾಶ ಉಳ್ಳ ಸೋಶಿಯಲಿಸ್ಟಿಕ್ ಪ್ಯಾಟ್ರನ್ ಸೊಸೈಟಿಯಲ್ಲಿ ಕೇವಲ ಪ್ರತಿಷ್ಠಿತರಿಗೆ ಮಾತ್ರ ಮಣೆ ಹಾಕಿ ಗಾಳಿ ಬೀಸಿ ಬಿಸಿ ಬಿಸಿ ಬೋಂಡ ಚಹಾ ಮುಂದಿಟ್ಟು ನಿಮ್ಮ ಮೇಲೆ ಪ್ರಭಾವ ಬೀರಿದ ಪುಸ್ತಕಗಳಾವು?" ಎಂದು ಹಲ್ಗಿರಿದು ಕೈ ಜೋಡಿಸಿ ಆ ಮಹನೀಯರ ತೊದಲು ನುಡಿಯೇ ಅಮೃತವಾಣಿ ಎಂದು ಹಿಗ್ಗಬೇಕಾದ ದಿನಗಳು ಹೋದುವು ಎಂದು ನನ್ನ ಅಭಿಪ್ರಾಯ.

ಕಾಮನ್‌ಮ್ಯಾನ್ ಬೀದಿಯ ಮಾನವ ಇವರ ಬಗ್ಗೆ ನಾವು ಚಿಂತಿಸಬೇಕಾಗಿದೆ ಈ ಶ್ರದ್ಧೆಯಿಂದ ನಾನು ಕೆಲವು ಕಾಮನ್ ಮ್ಯಾನ್‌ಗಳನ್ನು ಸಂದರ್ಶಿಸಿ ಅವರುಗಳ ಮೇಲೆ ಪ್ರಭಾವ ಬೀರಿದ ಪುಸ್ತಕಗಳಾವು? ಎಂದು ಕೇಳಿದೆ ಅವರುಗಳು ಹೇಳಿದ್ದನ್ನು ವರದಿ ಮಾಡಿದ್ದೇನೆ....

ರೇಡಿಯೋ ವಿವಿದ್ ಭಾರತಿ ಹೇಳುತ್ತಿತ್ತು. ಗಂಭೀರವಾದ ವಾತಾವರಣ "ಕಚ್ಚ ಕಚ ಕಚ, ಕಚ್ಚ ಕಚ ಕಚ" ಎಂಬ ಕತ್ತರಿಯ ಪ್ರಯೋಗದ ಸದ್ದು ನಾಲ್ಕು ಕುರ್ಚಿಗಳಿಂದ ಮಿಾಡಿ ಬರುತ್ತಿತ್ತು. ಹೇರಳ ಸೋಪು ಬಳಿದು ನೆನೆಯಲು ಬಿಟ್ಟಿದ್ದ ಕುಪ್ಪುಸ್ವಾಮಿ.

"ಅಯ್ಯಾ...."

"ರಾಯರೆ"

"ನಿನ್ನ ಮೇಲೆ ಪ್ರಭಾವ ಬೀರಿದ ಪುಸ್ತಕ ಯಾವುದು?"

"....ಹಳೇ ಫೋಟೋ ಪ್ಲೆ ಸಿನಿಮಾ ಫಿಲಂಫೇರ್ ಎಲ್ಲಕ್ಕಿಂತ ಈಚೆಗೆ ಬರೋಲ್ಲ ಹೋದ ಯುದ್ಧ ಕಾಲದಲ್ಲಿ ಯಾಂಕೆಗಳ ತಲೆ ಕಟಾವ್ ಕಾಲದಲ್ಲಿ ರಾಶಿರಾಶಿ

ಬರುತ್ತಿತ್ತು ವಿವಿಧ ಭಂಗಿಗಳ ಚಿತ್ತಲೆ ಹೆಣ್ಣುಗಳ ರಂಗು ರಂಗಿನ ಚಿತ್ರ ಆ ಪುಸ್ತಕ ನೋಡಿ....ಅದು ಇದ್ರೆ ನನ್ನ ಸೆಲೂನಿನಲ್ಲಿ ಬೆಳಗಿಂದ ಸಂಜೇತನಕ ಕಾದರೂ ಬೇಜಾರಿಲ್ಲದೆ ಕೂತು ತಲೆ ಕೊಡುತ್ತಿದ್ದರು—ಇದಕ್ಕಿಂತ ಬೇರೆ ಯಾವ ಪುಸ್ತಕ ಯಾಕೆ ನನ್ನ ಮೇಲೆ ಪ್ರಭಾವ ಬೀರಬೇಕು ರಾಯರೇ"....ಎಂದು ಕತ್ತಿ ಹಿಡಿದು ಸೋಪು ಸವರಿದ ಕೆನ್ನೆಯನ್ನು ಎದುರಿಸಿದ.

* * * *

"ನಮಸ್ಕಾರ"

"ಶರಣು"

"ನಿಮ್ಮನ್ನು ಒಂದು ಪ್ರಶ್ನೆ ಕೇಳಬೇಕೂಂತ"

"ಕೇಳಿ....ಸಾಲ ಕೇಳದಿದ್ರೆ ಸರಿ....ಕೇಳಿ"

"ನೀವು ಪುಸ್ತಕ ಪ್ರಿಯರೊ?"

"ಹೌದು"

"ಯಾವ ಪುಸ್ತಕ ನಿಮ್ಮಮೇಲೆ ಹೆಚ್ಚು ಪ್ರಭಾವ ಬೀರಿರುವುದು?"

"............"

"ಹೇಳಿ....ಸಂಕೋಚಬೇಡ"

"ನನ್ನ ಹೆಂಡ್ತಿ....ಮತ್ತೇ ಅವಳ ತೌರುಮನೆಯವರು ಕೊಂಚ ಅನುಕೂಲಸ್ತರು—ತಿಂಗಳು ತಿಂಗಳೂ ಅಷ್ಟು ಇಷ್ಟು ಸೇರಿಸಿ ವರ್ಷದಿಂದ ವರ್ಷಕ್ಕೆ ಅವಳ ಆಕಾರದಂತೆ ಈ ಬ್ಯಾಂಕ್ ಬ್ಯಾಲೆನ್ಸೂ ದಪ್ಪವಾಗುತ್ತಿದೆ ನೋಡಿ. ಅವಳ ಸೇವಿಂಗ್ಸ್ ಬ್ಯಾಂಕ್ ಅಕೌಂಟ್ ಚಕ್ ಪುಸ್ತಕ ನೋಡಿ ನನ್ನ ಮೇಲೆ ವಿಶೇಷ ಪ್ರಭಾವ ಬೀರಿದೆ...."

—ಎಂದು ದಂ ಎಳೆದರು ಚಿಲ್ರೆಕವಿ ಸಾಂಬಶಿವರು.

* * * *

"ನಮಸ್ತೆ ಸೇಟ್‌ಜೀ"

"ನಮಸ್ತೆ"

"ನಿಮ್ಮ ಮೇಲೆ ವಿಶೇಷ ಪ್ರಭಾವ ಬೀರಿದ ಪುಸ್ತಕ ಯಾವುದು ಸೇಟ್‌ಜೀ...."

" ಹಿ ಹಿ ಹಿ ಬಾಕಿ ಪುಸ್ತಕ ವಸೂಲಿ ಬುಕ್ ಅದಲ್ಲದೆ ಬೇರೆ ಯಾವ ಪುಸ್ತಕಾನೂ ನಾನು ನೋಡಲ್ಲ...."

* * * *

" ಗೋವಿಂದಯ್ಯ.... "

" ಸ್ವಾಮಿ "

" ನಿನ್ನ ಮೇಲೆ ಯಾವ ಪುಸ್ತಕ ಪ್ರಭಾವ ಬೀರಿದ್ವು. ಬೀರಿರುವುದು? ಬೀರುತ್ತಿರುವುದು ? "

" ಹಿ ಹಿ ಹಿ... "

" ಹೇಳೋ "

" ... ನಾಚಿಕೆ... ಆಯ್ತದೆ "

" ಇಲ್ಲಿ ಹೇಳೋ ನಿನ್ನಂಥಾ ರಸಿಕ ಪೇಟೆ ಕಾಮಣ್ಣನ ಅಭಿಪ್ರಾಯ ಮುಂದಿನ ಪೀಳಿಗೆಗೆ ನಂದಾದೀಪ, "

" ....ನಂಗೆ ಇಸ್ಯಾ ತಿಳ್ದಿರ್ಲಿಲ್ಲ ...ರತಿರಹಸ್ಯ ' ರಮಣಿಯು ಸೆರಗು ' ಈ ಪುಸ್ತಕ ಓದ್ದೆ ದಾರಿ ಸಿಕ್ತು ಆಮ್ಯಾಕೆ...." ನಗ್ನ.... " ಅನ್ನೂ ಪುಸ್ತಕ " ಪ್ರೇಮಪಿಶಾಚಿ " "ನಿದ್ರಾ ಸುಂದ್ರಿ " ಇವುಗಳು ಸಾಕಷ್ಟು ಪ್ರಭಾವ ಬೀರಿದವು. ರವಷ್ಟು ದಿನ ಪರಮಾಯಿಷಿ ಪುಸ್ತಕ ಬರ್ನೇ ಇಲ್ಲ ...ಆಮ್ಯಾಕೆ ನೋಡಿ ಬಂದುವು ಬಂದುವು ಬುಕ್ಕು ಗೋಳೂ....ಒಂದೊಂದು ಒಂದೊಂದು ಪರಭಾವ ಕೊಟ್ಟವು ನೋಡ್ಕಳಿ.... " ಜಾಲ್ರಿ ಬಂಗ್ಲೆ "...." ನೀ ಬಾರೆ ನೀರೆ " " ಗುಲಗಂಜಿ " ಬಳೇಪೇಟೆ ಗಲ್ಲಿ " " ಬಂದಳು ಸುಂದರಿ " ಈ ಪುಸ್ತಕಗಳು ನೋಡಿ ರಾಜಾ ಪುಸ್ತಕ.... ಹಾಯಾಗಿ ಈಗ ನೋಡಿ ದೊಡ್ಡಾಸ್ಪತ್ರೆ ಎಂಟನೇ ವಾರ್ಡಲ್ಲಿ ಹಾಸಿಗೆ ದಿಂಬು ಆರೈಕೆಗೆ ನರ್ಸಮ್ಮ ಸಿಕ್ಕಾರೆ...." ಎಂದು ಮಲಗಿದ ಮಂಚದಮೇಲೆ ವಾರ್ಡಿನಲ್ಲಿ. ಮೇಹರೋಗದ ಪ್ರಭಾವ ಮಹತ್ತರವಾಗಿ ಮೂಡಿತ್ತು ಅವನ ಮುಸುಡಿಮೇಲೆ.

* * * *

" ಸ್ವಾಮಿ ಯಾವ ಪುಸ್ತಕ ನಿಮ್ಮ ಮೇಲೆ ವಿಶೇಷ ಪ್ರಭಾವ ಬೀರಿದೆ ?.... "

" ಕ್ಯಾಷ್ ಲೆಡ್ಜರ್, ನನಗೆ ಏನೇನೂ ಪ್ರಭಾವ ಬೀರಿಸದು....ಈ ಓವರ್ ಡ್ರಾಫ್ಟ್ ಅಕೌಂಟ್ ಇದೆ ನೋಡಿ ಅದರದೇ ಫಜೀತಿ....ರಿಸರ್ವ್ ಬ್ಯಾಂಕಿನೋರು

ಕಿತ್ರಿ ಕಿತ್ರಿ ಹಾಕಿಬಿಡ್ತಾರೆ—ಪಾಲ್ಸೈ ಬ್ಯಾಂಕು ನೋಡಿದಿರೋ ಇಲ್ವೊ? ಹಾಳಾದ್ದು ಈ ಚಿನ್ನ ಕೂಡ ಇಟ್ಕೊಂಡು ಸಾಲಾ ಕೊಡೋಹಾಗಿಲ್ಲ...."

"ಅಂದ್ರೇ ಪ್ರಭಾವ ಬೀರಿದ ಪುಸ್ತಕನೇ ಇಲ್ವೆ?"

"ಇಲ್ದೆ ಉಂಟೇ ಡೇ ಬುಕ್ ಎಂಟ್ರಿ ಡೆಬಿಟ್ಟು ಕ್ರೆಡಿಟ್ಟು ರೀಕೋಲಾಕ್ ನಾಲ್ಕುವರೆ ಅದ್ರೆ ಆಲ್ ಬುಕ್ಸ್ ಕ್ಲೋಸ್....ಎಂಥವರೇ ಬರ್ಲಿ ಯಾವ ಪುಸ್ತಕಾನೂ ತೆಗೆಯೊಲ್ಲ ...ಬ್ಯಾಂಕಿಂಗ್ ಅಂದ್ರೆ ಹುಡುಗಾಟವೇ ಸಾರ್ ತಲೆ ಹೋಗುತ್ತೆ ಪುಸ್ತಕ ಗಳನ್ನ ಸರಿಯಾಗಿಡದೇ ಇದ್ರೆ...."

"ನಾನು ಬರ್ತೀನಿ...."

"ಒಳ್ಳೇದು."

* * * *

"....ಪುಸ್ತಕ....ಅಹಹ....ಗೀತೆ....ಮಹಾ ಭಾರತದ ರಾಜಾ ರಾಣಿ ರಥದ ಕುದುರೆಯ ಜಾಕಿ ಕೃಷ್ಣನಂತೆ ಏಸು....ಕಳಾವರ್ ತುರುಫ್ ಹಾರ್ಟ್ಸ ಹೃದಯ ಕರಗಿಸುವ ಪುಸ್ತಕ ಆ ಬಿಡಿ ಬಿಡಿಯ ಹಾಳೆಗಳಂತಹ ಹೊಳೆಯುವ ಬಣ್ಣ ಬಣ್ಣದ ಇಸ್ಪೀಟ್ ಪ್ಯಾಕು ...ಅದಕ್ಕಿಂತ ಪ್ರಭಾವ ಬೀರುವ ಪುಸ್ತಕ ಪ್ರಪಂಚದಲ್ಲಿ ಯಾವುದೂ ಇಲ್ಲ ..."

—ಎಂದು ಬೀಡಿ ಕಚ್ಚಿ ಚಕ ಚಕನೆ ಕಲಸಿ ಹಂಚಿ ತಮ್ಮ ಆಟದಲ್ಲೇ ಮಗ್ನ ರಾದರು ರಾಜಾರಾಯರು. ಅವರಿಗೆ ಮನೆಯ ರಾಣಿಯೂ ನೆನಪಿರುತ್ತಿರಲಿಲ್ಲ ಅಷ್ಟು ಪ್ರಭಾವ ಬೀರಿತ್ತು....ಆ ಪ್ಯಾಕು.

* * * *

"ತಾವು ಹೇಳಬೇಕು ಯಾವ ಪುಸ್ತಕ ತಮ್ಮಮೇಲೆ ಹೆಚ್ಚು ಪ್ರಭಾವ ಬೀರಿದೆ...."

"ಬೀರಿದೆ....ಬೀರೂ ಇದೆ? ಎಲ್ಲಿ? ಟಿನೆಂಟ್ಸೊ....ಕಿಂಗ್ ಫಿಷರ್ರೊ? oh Beer !!!....ಅಂ ಏನಂದ್ರಿ? ಪುಸ್ತಕ?

"....ಹಾಗಂದ್ರೇನು?...."

"ಬರ್ತೀನಿ...."

—ಹೀಗಿದೆ ವಿವಿಧ ವ್ಯಕ್ತಿಗಳಿಗೆ ಪ್ರಭಾವ ಬೀರಿದ ಪುಸ್ತಕಗಳು !!

—ಬಂಗಾರಯ್ಯ

Statement about ownership and otl
about newspaper **KORAVANJı** to
in the first issue every year afte
February.

FORM IV

(SEE RULE 8)

.	Place of Publication	BANGALORE
2.	Periodicity of its publication...	MONTHLY
3.	Printer's Name	SHRI. B. SREENIVASA IYENGAR
	Nationality	HINDU
	Address	COTTONPET, BANGALORE.
4.	Publisher's Name	SHRI B. N GUPTA
	Nationality	HINDU
	Address	C/o KORAVANJI, BANGALORE-9.
5.	Editor's Name	M. SIVARAM
	Nationality	HINDU
	Address... ...	PROPRIETOR, KORAVANJI, BANGALORE-9
6.	Names and address of individuals who own the newspapers and partners or shareholders holding more than one per cent of the total capital	M. SIVARAM Sole Proprietor KORAVANJI BANGALORE-9

I, M. SIVARAM, hereby declare that the particulars given above are true to the best of my knowledge and belief.

M. SIVARAM

Date 28-2-63 *For Signature of Publisher*

ಕತ್ರಿ ಕತ್ರಿ ಹಾಕಿಬಿಡ್ತಾರೆ-
ಈ ಚಿನ್ನ ಕೂಡ ಇಟ್ಕೊಂ

“ ಅಂದ್ರೇ ಪ್ರಭಾವ

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

ಬೆಂಗಾಲ್

ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೩

REG. NO. B. G. 343 KORAVANJI JAN. 1963.

Printed by B. S. Iyengar, Bangalore City.

Publisher—B. N. Gupta. Editor—M. Sivaram.